2017 ಕ.ತೀ.ವ 725

(ಧಾರವಾಡ ಪೀಠ)

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎಸ್. ಅಬ್ದುಲ್ ನಜೀರ್
ಮತ್ತು
ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಬೂದಿಹಾಳ್ ಆರ್.ಬಿ.

ಹುಲಗಪ್ಪ –ವಿರುದ್ಧ– ಸರ್ಕಲ್ ಪೊಲೀಸ್ ಇನ್ಸ್‌ಪೆಕ್ಟರ್, ಹುನಗುಂದ ಸರ್ಕಲ್, ಕರ್ನಾಟಕ ರಾಜ್ಯ*

ದಂಡ ಪ್ರಕ್ರಿಯಾ ಸಂಹಿತೆಯ 374(2) ನೇ ಪ್ರಕರಣದ ಮೇರೆಗೆ ಈ ಕ್ರಿಮಿನಲ್ ಅಪೀಲನ್ನು ಸಲ್ಲಿಸಲಾಗಿದೆ.

ಸಾಕ್ಷ್ಯ ಅಧಿನಿಯಮ, 1872 ರ 32(1) ನೇ ಪ್ರಕರಣ

ಈ ಅಪೀಲು ಅರ್ಜಿಯಲ್ಲಿ ಸೆಷನ್ಸ್ ನ್ಯಾಯಾಧೀಶರು, ಬಾಗಲಕೋಟೆ ಇವರು ಎಸ್.ಸಿ.ಸಂ. 27/2011 ರಲ್ಲಿ ದಿನಾಂಕ 09.01.2012 ರಂದು ಹೊರಡಿಸಿದ ತೀರ್ಪನ್ನು ಮತ್ತು ಅಪರಾಧ ನಿರ್ಣಯದ ಆದೇಶವನ್ನು ಪ್ರಶ್ನಿಸಲಾಗಿದೆ. ಸದರಿ ತೀರ್ಪಿನಲ್ಲಿ, ಅಪೀಲುದಾರ – ಆಪಾದಿತ ಸಂ.1 ಅವನು ಮಾಡಿರುವ ಅಪರಾದವು ಭಾರತದ ದಂಡ ಸಂಹಿತೆಯ 498 ಎ ಮತ್ತು 302 ನೇ ಪ್ರಕರಣದ ಅಡಿಯಲ್ಲಿ ದಂಡನೀಯ ಅಪರಾಧವನ್ನು ಎಸಗಿರುವನೆಂದು ನ್ಯಾಯ ನಿರ್ಣೀತನಾಗಿರುವನು. ಅದಕ್ಕನುಸಾರವಾಗಿ ಅಪೀಲುದಾರ – ಆಪಾದಿತ ಸಂಖ್ಯೆ 1 – ಇವನಿಗೆ ಶಿಕ್ಷೆಯನ್ನು ವಿಧಿಸಲಾಗಿದೆ ಮತ್ತು ಆಪಾದಿತ ಸಂಖ್ಯೆ 2 ರಿಂದ 4 ರಲ್ಲಿರುವ ಆರೋಪಿಗಳನ್ನು ಖುಲಾಸೆಗೊಳಸಲಾಗಿದೆ.

ಮರಣಕಾಲೀನ ಹೇಳಿಕೆಯೂ ಯಾರೇ ವ್ಯಕ್ತಿ ತನ್ನ ಮರಣದ ಕಟ್ಟಕಡೆಯ ಸ್ಥಿತಿಯಲ್ಲಿ ನೀಡಿದ ಹೇಳಿಕೆಯನ್ನು ಆಧಾರಿಸಿದೆ ಮತ್ತು ಮೃತನು ತನ್ನ ಜೀವಿತದ ಕೊನೆಯಲ್ಲಿ

*ಕ್ರಿಮಿನಲ್ ಅರ್ಜಿ ಸಂಖ್ಯೆ: 2620/2012, ದಿನಾಂಕ: 4ನೇ ಡಿಸೆಂಬರ್, 2015.

ತಾನು ಬದುಕುವ ಎಲ್ಲಾ ಆಸೆಯನ್ನು ಅವನು ಕೈಬಿಟ್ಟಿರುವಾಗ ಅವನ ಹೇಳಿಕೆಯು ಶಾಬ್ದಿಕ ವ್ಯವಹರಣೆಯಾಗಿರುವುದಿಲ್ಲ ಮತ್ತು ಇಲ್ಲಿ ಸುಳ್ಳಿನ ಉದ್ದೇಶವು ಸಂಪೂರ್ಣವಾಗಿ ನಿರುತ್ತರವಾಗಿರುತ್ತವೆ ಮತ್ತು ಸಾಯುವಂತಹ ಸ್ಥಿತಿಯಲ್ಲಿ ಸತ್ಯವನ್ನು ಹೇಳುವಂತಹ ಮನಸ್ಥಿತಿ ಇರುತ್ತದೆ. ಆ ಸಂದರ್ಭದಲ್ಲಿ ಸತ್ಯವನ್ನು ನುಡಿಯುವುದರಿಂದ ಮರಣಕಾಲೀನ ಹೇಳಿಕೆಯನ್ನು ತುಂಬಾ ಪರಿಣಾಮಕಾರಿ ಹೇಳಿಕೆ ಎಂದು ಪರಿಗಣಿಸಬೇಕಾಗುತ್ತದೆ. ಆದುದರಿಂದಲೇ ಮರಣಕಾಲೀನ ಹೇಳಿಕೆಯೂ ಗಾಂಭೀರ್ಯತೆಯನ್ನು ಆಧಾರಿಸಿದೆ. ಮರಣಕಾಲೀನ ಹೇಳಿಕೆಯು ತೃಪ್ತಿದಾಯಕವಾಗಿ ಸ್ಥಾಪಿತವಾದ ಹೇಳಿಕೆಯಾಗಿರುತ್ತದೆ. ಹಾಗೂ ಅಪರಾಧ ನಿರ್ಣಯಕ್ಕಾಗಿ ಅದು ಏಕೈಕ ಆಧಾರವಾಗಿರುತ್ತದೆ ಮತ್ತು ಇದನ್ನು ಆ ಯಾವುದೇ ಇತರ ಮೂಲಗಳಿಂದ, ಯಾವುದೇ ಇತರ ಸಾಕ್ಷ್ಯವನ್ನು ಪುಷ್ಠೀಕರಿಸುವ ಅಗತ್ಯವಿರುವುದಿಲ್ಲ ಎಂದು ಕಾನೂನು ಸ್ಪಷ್ಟವಾಗಿ ಹೇಳುತ್ತದೆ. (ಪ್ಯಾರಾ 15)

ನಾವು ನಿಶಾನೆ ಪಿ–6 ದಸ್ತಾವೇಜನ್ನು ಪ್ರಾ.ಸಾ–4 ತಂದೆಯು ದಾಖಲಿಸಿದ ದೂರನ್ನು ಸಹ ಪರಿಶೀಲಿಸಿರುತ್ತೇವೆ. ನಿಶಾನೆ ಪಿ–6 – ದೂರಿನ ವಾದಾಂಶವನ್ನು ನೋಡಿದಾಗ, ದೂರಿನಲ್ಲಿ ದೂರುದಾರರು ತಮ್ಮ ಮಗಳು ಸುಟ್ಟುಗಾಯಗಳಿಂದ ಬಾದಿತಳಾಗಿದ್ದಾಳೆ ಎಂಬ ಮಾಹಿತಿ ತಿಳಿದ ಆ ಕೂಡಲೇ ಅವರು ಇಳಕಲ್‌ನಲ್ಲಿರುವ ಸರ್ಕಾರಿ ಆಸ್ಪತ್ರೆಗೆ ಧಾವಿಸಿರುವುದನ್ನು ತಮ್ಮ ಹೇಳಿಕೆಯಲ್ಲಿ ದಾಖಲಿಸಿರುತ್ತಾರೆ. ಅವರು ಆ ಆಸ್ಪತ್ರೆಗೆ ಹೋದಾಗ ಅಲ್ಲಿ ಆಸ್ಪತ್ರೆಯವರು ಮಗಳನ್ನು ಬಾಗಲಕೋಟೆಯಲ್ಲಿರುವ ಜಿಲ್ಲಾ ಆಸ್ಪತ್ರೆಗೆ ಕರೆದೊಯ್ಯಲಾಗಿರುವುದು ತಿಳಿದು ಬರುತ್ತದೆ. ಅವರು ತಮ್ಮ ಹೇಳಿಕೆಯನ್ನು ಮುಂದುವರೆಸುತ್ತಾ ಬಾಗಲಕೋಟೆ ಆಸ್ಪತ್ರೆಯಲ್ಲಿ ಸುಟ್ಟಗಾಯಗಳಿಂದ ಬಾದಿತಳಾದ ಮಗಳನ್ನು ನೋಡಿದ ತರುವಾಯ. ದೂರುದಾರರಾದ ಅವಳ ತಂದೆ ಇದೆಲ್ಲ ಹೇಗಾಯಿತು ಎಂದು ಪ್ರಶ್ನಿಸಿದಾಗ ಅವಳು ಗಂಡ ಮತ್ತು ಕುಟುಂಬ ಸದಸ್ಯರು ಅವಳಿಗೆ ನೀಡಿದ ಕಿರುಕುಳವನ್ನು, ಅವರೆಲ್ಲ ಹೊಲಸಾದ ಭಾಷೆಯಲ್ಲಿ ಅವಳನ್ನು ನಿಂದಿಸಿದ್ದನ್ನು ಮತ್ತು ಆರೋಪಿ ಸಂ.1 ಆಗಿರುವ, ಇಲ್ಲಿ ಅಪೀಲುದಾರನಾಗಿರುವ ಅವಳ ಗಂಡನಿಗೆ ಅವಳು ತಾನು ಆತ್ಮಹತ್ಯೆ ಮಾಡಿಕೊಳ್ಳತ್ತೇನೆ ಎಂದಾಗ ಆರೋಪಿ ಸಂ.1/ಅಪೀಲುದಾರನೂ ಸಹ ನೀನು ಹೋಗಿ ಸಾಯಿ ಎಂದು ಅವಳಿಗೆ ಹೇಳಿ, ಅವಳನ್ನು ಮತ್ತಷ್ಟು ಮಾತುಗಳಿಂದ ನಿಂದಿಸಿದ್ದನ್ನ ತನ್ನ ತಂದೆಗೆ ತಿಳಿಸಿರುತ್ತಾಳೆ. ನಂತರದಲ್ಲಿ ಅವಳು ಸ್ವತಃ ತಾನೇ ತನ್ನ ದೇಹದ ಮೇಲೆ ಸೀಮೆಎಣ್ಣೆ ಸುರಿದುಕೊಂಡು ಬೆಂಕಿಯನ್ನು ಇಟ್ಟುಕೊಂಡಿರುವುದನ್ನು ತಂದೆಯಲ್ಲಿ ಎಲ್ಲವನ್ನು ವಿನಂತಿಸಿರುವುದು ಕಂಡುಬರುತ್ತದೆ. ಮೃತ ದೇವಮ್ಮ

ಬಾಯಿಮಾತಿನಲ್ಲಿ ಹೇಳಿದ ವಿವರಣೆಗಳ ಆಧಾರದ ಮೇಲೆ ದೂರುದಾರರಾದ ಅವಳ ತಂದೆ ನಿಶಾನೆ ಪಿ-6 ರ ಪ್ರಕಾರದಂತೆ ದೂರನ್ನು ದಾಖಲಿಸಿರುವರು ಮತ್ತು ನಿಶಾನೆ ಪಿ-6 ರ ದೂರಿಗೆ ತಮ್ಮ ಸಹಿಯನ್ನು ಹಾಕಿರುವರು. ಪ್ರಾಸಿಕ್ಯೂಷನ್ ಅವರ ಇಡೀ ವಾದಾಂಶವು ದೂರುದಾರರ ವಾದಾಂಶಕ್ಕಿಂತಲೂ ಭಿನ್ನವಾಗಿದೆ. ದೂರಿನ ಪ್ರಕಾರ, ಮೃತಳು ಸ್ವತಃ ತಾನೇ ಸೀಮೆಎಣ್ಣೆ ಸುರಿದುಕೊಂಡು ಬೆಂಕಿ ಹಚ್ಚಿಕೊಂಡಿರುವುದರಿಂದ ಇದು ಒಂದು ಆತ್ಮಹತ್ಯೆಯ ಮೊಕದ್ದಮೆಯಾಗಿದೆ. ಇದು ನಿಶಾನೆ ಪಿ-17 ರ ಅಡಿಯಲ್ಲಿ ಮಾಡಿದ ಮರಣಕಾಲೀನ ಹೇಳಿಕೆಯೂ ಪ್ರಾಸಿಕ್ಯೂಷನ್ ಮೊಕದ್ದಮೆಗೆ ಸಂಪೂರ್ಣವಾಗಿ ವಿರುದ್ಧವಾಗಿದೆ. ಈ ನ್ಯಾಯಾಲಯ ಈ ಮೇಲಿನ ಎಲ್ಲಾ ದೃಷ್ಟಿಕೋನಗಳನ್ನ ಪರಿಗಣನೆಗೆ ತೆಗೆದುಕೊಂಡರೆ. ನಿಶಾನೆ ಪಿ-17 ರ ಪ್ರಕಾರದಂತೆ ಮೃತಳು ನೀಡಿದ ಮರಣಕಾಲೀನ ಹೇಳಿಕೆಯೆಂದು ದಾಖಲಿಸಿದ ಪ್ರಾಸಿಕ್ಯೂಷನ್ ಅವರ ವಾದವನ್ನು ಸ್ವೀಕರಿಸುವುದಕ್ಕೆ ತುಂಬಾ ತ್ರಾಸಕಾರಕವಾಗಿದೆ. ಇದೊಂದು ನರಹತ್ಯೆಯೆಂದು ವಾದ ಮಂಡಿಸಿರುವ ಪ್ರಾಸಿಕ್ಯೂಷನ್ ಅವರ ವಾದವನ್ನು ಒಪ್ಪುವುದು ಕಷ್ಟಕರವಾದುದಾಗಿದೆ. ಈ ನ್ಯಾಯಾಲಯವು ಮೌಖಿಕವಾಗಿ ಮತ್ತು ದಸ್ತಾವೇಜಿನಲ್ಲಿ ದಾಖಲಾದ ಎಲ್ಲಾ ಸಾಕ್ಷ್ಯಗಳನ್ನು ಪರಿಶೀಲಿಸಿದಾಗ ಮೃತ ದೇವಮ್ಮ ನೀಡಿದ ಅಂಥ ಮರಣಕಾಲೀನ ಹೇಳಿಕೆಯು ತೃಪ್ತಿಕರವಾಗಿಲ್ಲದಿರುವುದನ್ನು ಅದು ದಾಖಲಿಸುತ್ತದೆ. ದಾಖಲೆಯಲ್ಲಿ ಮಂಡಿಸಿದ ಎಲ್ಲಾ ವಸ್ತು ವಿಷಯವನ್ನು ಅವಲೋಕಿಸಿದಾಗ ಇದು ದೇವಮ್ಮಳ ಮರಣ ಒಂದು ಆತ್ಮಹತ್ಯೆಯ ಮೊಕದ್ದಮೆಯಾಗಿರುವುದು ಸ್ಪಷ್ಟವಾಗುತ್ತದೆ. (ಪ್ಯಾರಾ 19)

ಈ ಉಪಬಂಧವನ್ನು ಮತ್ತು ಸನ್ಮಾನ್ಯ ಸರ್ವೋಚ್ಚ ನ್ಯಾಯಾಲಯದ ನಿರ್ಣಯವನ್ನು ಗಮನಿಸಿದಾಗ, ದಾಖಲೆಯ ಮೇಲೆ ಮಂಡಿತವಾದ ವಸ್ತು ವಿಷಯವನ್ನು ಅವಲೋಕಿಸಿದ ನಂತರ ಈ ನ್ಯಾಯಾಲಯವು ಅಪೀಲುದಾರ/ಆರೋಪಿಯು ಎಸಗಿರುವಂತಹ ಇತರ ಅಪರಾಧ ವಸ್ತು ವಿಷಯವನ್ನು ಸೂಚಿಸಿರುವುದನ್ನು ಅದು ಅಭಿವ್ಯಕ್ತಿಸಿದರೆ, ಸದರಿ ಅಪರಾಧಕ್ಕಾಗಿ ಆರೋಪಗಳು ಇಲ್ಲದಿದ್ದರೂ ಸಹ ಅವನನ್ನು ಅಪರಾಧಿ ಎಂದು ನಿರ್ಣಯಿಸಲು ಸಕ್ಷಮ ಅಧಿಕಾರವನ್ನು ಹೊಂದಿದೆ. ಈ ಕಾನೂನು ಸ್ಥಾನವನ್ನು ಮತ್ತು ದಾಖಲೆ ಮೇಲೆ ಮಂಡಿತವಾದ ವಸ್ತು ವಿಷಯವನ್ನು ಪರಿಗಣನೆಗೆ ತೆಗೆದುಕೊಂಡು ಪರಿಗಣಿಸಿದಾಗ, ನಾವು ಈಗಾಗಲೇ ಪರಿಶೀಲಿಸಿರುವ ಪ್ರಕಾರ, ದಂಪತಿಗಳು ಪ್ರತ್ಯೇಕವಾಗಿ ವಾಸಿಸುತ್ತಿದ್ದರು ಮತ್ತು ಗಂಡ ಮಾತ್ರವೇ ಹೊಣೆಗಾರಿಕೆಯ ವ್ಯಕ್ತಿಯಾಗಿರುತ್ತಾನೆ ಮತ್ತು ಅವನು ಮೃತಳು ಹೊಟ್ಟೆ ನೋವಿನಿಂದ ಅಥವಾ ಗಂಭೀರ

ಕಾಯಿಲೆಯಿಂದ ಬಳಲುತ್ತಿದ್ದ ಕಾರಣ ಮೃತಳು ತನ್ನ ದೇಹದ ಮೇಲೆ ಸೀಮೆಎಣ್ಣೆ ಸುರಿದುಕೊಂಡು ತಾನೇ ಬೆಂಕಿಹಚ್ಚಿಕೊಂಡು ಆತ್ಮಹತ್ಯೆ ಮಾಡಿಕೊಳ್ಳುವ ಕಠಿಣ ನಿರ್ಧಾರವನ್ನು ತೆಗೆದುಕೊಂಡಿರುತ್ತಾಳೆ ಎಂದು ಮೃತಳ ಗಂಡನು ಯಾವುದೇ ನಿರ್ದಿಷ್ಟ ಹೇಳಿಕೆ ನೀಡಿರುವುದಿಲ್ಲ. ಪ್ರತಿಯೊಬ್ಬ ಮಾನವನಿಗೂ ಬದುಕು ಎಂಬುದು ತುಂಬಾ ಶ್ರೇಷ್ಠ ಮಟ್ಟವಾಗಿರುತ್ತವೆ ಮತ್ತು ಯಾವುದೇ ಕಾರಣದ ಹೊರತು ವ್ಯಕ್ತಿ ಬದುಕನ್ನು ಅಂತ್ಯ ಮಾಡಿಕೊಳ್ಳುವಂಥ ಕಠಿಣ ನಿರ್ಧಾರವನ್ನು ತೆಗೆದುಕೊಳ್ಳುವುದಿಲ್ಲ. ಮೃತ ದೇವಮ್ಮ ಆತ್ಮಹತ್ಯೆ ಮಾಡಿಕೊಳ್ಳಲು ಆರೋಪಿ ಸಂ.1–ಅಪೀಲುದಾರ ನೀಡಿರುವ ಕಿರುಕುಳ ಮತ್ತು ಚಿತ್ರಹಿಂಸೆಯ ಕಾರಣವೆಂದು ಈ ದಾಖಲೆಯ ವಸ್ತುವಿಷಯಗಳು ಸ್ಪಷ್ಟವಾಗಿ ಹೇಳುತ್ತಿದೆ. ಆದುದರಿಂದ ಅಪೀಲುದಾರ–ಆರೋಪಿ ಸಂ.1 ಇವನು ಭಾರತ ದಂಡ ಸಂಹಿತೆಯ 306ನೇ ಪ್ರಕರಣದ ಅಡಿಯಲ್ಲಿನ ಅಪರಾಧಕ್ಕಾಗಿ ದಂಡನೆಗೆ ಹೊಣೆಗಾರನಾಗಿರುತ್ತಾನೆ. ದಾಖಲೆ ಮೇಲೆ ಮಂಡಿತವಾದ ವಸ್ತು ವಿಷಯದೊಂದಿಗೂ ಇದನ್ನು ಸುಸ್ಥಾಪಿಸಬಹುದಾಗಿದೆ. (ಪ್ಯಾರಾ 26)

*ಉಲ್ಲೇಖಿಸಲಾದ ಮೊಕದ್ದಮೆಗಳು* *ಪ್ಯಾರಾಗಳಲ್ಲಿ*

1. *ಜೆಟಿ 2011 (13) ಎಸ್‌ಸಿ 290:(2011) 10 ಎಸ್‌ಸಿಸಿ 173*
   *ಸುರೀಂದರ್ ಕುಮಾರ್ –ವಿರುದ್ಧ–*
   *ಹರಿಯಾಣ ರಾಜ್ಯ* *(ಉಲ್ಲೇ) 7*
2. *2014 ಎಸ್ಎಆರ್ (ಕ್ರಿಮಿನಲ್) 438*
   *ಭಗವಾನ್ ತುಕಾರಾಂ ದಾಂಗೆ –ವಿರುದ್ಧ–*
   *ಮಹಾರಾಷ್ಟ್ರ ಸರ್ಕಾರ* *(ಉಲ್ಲೇ) 11*
3. *ಎಐಆರ್ 2002 ಎಸ್‌ಸಿ 2973*
   *ಲಕ್ಷ್ಮಣ –ವಿರುದ್ಧ– ಮಹಾರಾಷ್ಟ್ರ ಸರ್ಕಾರ* *(ಉಲ್ಲೇ) 16*
4. *(2003) 1 ಎಸ್‌ಸಿಸಿ 217*
   *ಕೆ. ಪ್ರೇಮ ಎಸ್. ರಾವ್ ಮತ್ತು ಮೊತ್ತೊಬ್ಬರು*
   *–ವಿರುದ್ಧ– ಯಡಲಾ ಶ್ರೀನಿವಾಸ ರಾವ್*
   *ಮತ್ತು ಮತ್ತೊಬ್ಬರು* *(ಉಲ್ಲೇ) 25*

ಅರ್ಜಿದಾರರ ಪರವಾಗಿ: ಶ್ರೀ ಪಿ.ಎಸ್. ಹೊಸಮನೆ, ವಕೀಲರು.

ಪ್ರತ್ಯರ್ಜಿದಾರರ ಪರವಾಗಿ: ಶ್ರೀ ಪ್ರವೀಣ್ ಕೆ. ಉಪ್ಪಾರ್, ಸರ್ಕಾರಿ ವಕೀಲರು.

**ತೀರ್ಪು**

**ನ್ಯಾಯಮೂರ್ತಿ ಶ್ರೀ ಬೂದಿಹಾಳ್ ಆರ್.ಬಿ.**

ಈ ಅಪೀಲು ಅರ್ಜಿಯಲ್ಲಿ ಸೆಷನ್ಸ್ ನ್ಯಾಯಾಧೀಶರು, ಬಾಗಲಕೋಟೆ ಇವರು ಎಸ್.ಸಿ.ಸಂ. 27/2011 ರಲ್ಲಿ ದಿನಾಂಕ 09.01.2012 ರಂದು ಹೊರಡಿಸಿದ ತೀರ್ಪುನ್ನು ಮತ್ತು ಅಪರಾಧ ನಿರ್ಣಯದ ಆದೇಶವನ್ನು ಪ್ರಶ್ನಿಸಲಾಗಿದೆ. ಸದರಿ ತೀರ್ಪಿನಲ್ಲಿ, ಅಪೀಲುದಾರ–ಆಪಾದಿತ ಸಂ.1 ಅವನು ಮಾಡಿರುವ ಅಪರಾದವು ಭಾರತದ ದಂಡ ಸಂಹಿತೆಯ 498 ಎ ಮತ್ತು 302 ನೇ ಪ್ರಕರಣದ ಅಡಿಯಲ್ಲಿ ದಂಡನೀಯ ಅಪರಾಧವನ್ನು ಎಸಗಿರುವನೆಂದು ನ್ಯಾಯ ನಿರ್ಣಿತನಾಗಿರುವನು. ಅದಕ್ಕನುಸಾರವಾಗಿ ಅಪೀಲುದಾರ–ಆಪಾದಿತ ಸಂಖ್ಯೆ 1–ಇವನಿಗೆ ಶಿಕ್ಷೆಯನ್ನು ವಿಧಿಸಲಾಗಿದೆ ಮತ್ತು ಆಪಾದಿತ ಸಂಖ್ಯೆ 2 ರಿಂದ 4 ರಲ್ಲಿರುವ ಆರೋಪಿಗಳನ್ನು ಖುಲಾಸೆಗೊಳಿಸಲಾಗಿದೆ. ಆರೋಪಿ ಸಂಖ್ಯೆ 2 ರಿಂದ 4 ರಲ್ಲಿರುವ ಆರೋಪಿಗಳನ್ನು ಖುಲಾಸೆ ಮಾಡಿರುವ ವಿರುದ್ಧ ಎರಡು ಪಕ್ಷಕಾರರು, ರಾಜ್ಯವು ಯಾವುದೇ ಅಪೀಲನ್ನು ಸಲ್ಲಿಸಿರುವುದಿಲ್ಲ.

2. ನಿಶಾನೆ 6, ಪ್ರಾಸಾ 4 ದೂರುದಾರನ ಪ್ರಕಾರ ಮೊಕದ್ದಮೆಯ ವಿಚಾರಣೆಯ ಸಂಕ್ಷಿಪ್ತ ಸಂಗತಿಗಳು ಹೀಗಿದೆ. ಮೃತಳ ತಂದೆಯೂ ದೂರನ್ನು ದಾಖಲಿಸಿರುವರು, ದೂರುದಾರರು ಲಿಂಗಸಗೂರು ತಾಲೂಕಿನಲ್ಲಿನ ರಾಂಪುರದ ನಿವಾಸಿಯಾಗಿದ್ದಾರೆ ಮತ್ತು ಅವರಿಗೆ ಇಬ್ಬರು ಹೆಣ್ಣು ಮಕ್ಕಳು ಇದ್ದರೂ ಅವರುಗಳು ಹುಲಿಗೆಮ್ಮ ಮತ್ತು ಮೃತಳಾಗಿರುವ ದೇವಮ್ಮ ಮತ್ತು ಒಬ್ಬ ಮಗನಿರುವನು. ಅವನ ಹೆಸರು ಹುಲಗಪ್ಪ. 8–9 ವರ್ಷಗಳ ಹಿಂದೆ, ಮೃತ ದೇವಮ್ಮನನ್ನು ಹಿರೇಕೊಂಡಗಲಿ ಗ್ರಾಮದ ಆರೋಪಿ ಸಂ.1–ಅವನೊಂದಿಗೆ ಮದುವೆ ಮಾಡಿಕೊಡಲಾಗಿತ್ತು ಮೃತಳು ಮರಣವನ್ನಪ್ಪಿದಾಗ ಅವಳಿಗೆ ಒಬ್ಬ ಮಗ ಮತ್ತು ಒಬ್ಬ ಮಗಳು ಇರುತ್ತಾರೆ.

ಆರೋಪಿ ಸಂ.2 – ಆರೋಪಿ ಸಂ.1 ಇವನ ಸಹೋದರನಾಗಿರುವನು, ಆರೋಪಿ ಸಂ.3 – ಆರೋಪಿ ಸಂ.1 ಇವನ ತಾಯಿಯಾಗಿರುವರು ಮತ್ತು ಆರೋಪಿ ಸಂ.4, ಆರೋಪಿ ಸಂ.1 ಇವನ ಸಹೋದರನ ಹೆಂಡತಿ ಯಾಗಿರುತ್ತಾಳೆ, ಮೃತಳು ಅವಳ ಅತ್ತೆ–ಮಾವಂದಿರೊಂದಿಗೆ ವಾಸಿಸುತ್ತಿದ್ದಳು. ಆರೋಪಿಗಳು ಕ್ಷುಲ್ಲಕ ಕಾರಣಗಳಾಗಿ ಯಾವಾಗಲು ಮೃತಳೊಂದಿಗೆ ಜಗಳವಾಡುತ್ತಿದ್ದರು. ಆದುದರಿಂದ, ಮೃತಳು ಆರೋಪಿ ಸಂಖ್ಯೆ 1–ಅವನೊಂದಿಗೆ ಪ್ರತ್ಯೇಕವಾಗಿ ವಾಸಿಸಲು ಪ್ರಾರಂಭಿಸುತ್ತಾಳೆ ಆದರೂ ಆರೋಪಿಗಳು ಮೃತ ದೇವಮ್ಮನೊಂದಿಗೆ ಜಗಳವಾಡುತ್ತಿದ್ದರು. 19.12.2010 ರಂದು, ರಾತ್ರಿ 11 ಗಂಟೆ ಸುಮಾರಿಗೆ ಆರೋಪಿ ಸಂಖ್ಯೆ 1 ಇವನ ಸಂಬಂಧಿಗಳಲ್ಲಿ ಒಬ್ಬರಾದ ತಿಮ್ಮಣ್ಣ ಹರಿಜನ ಎನ್ನುವವರು ಆರೋಪಿ ಸಂಖ್ಯೆ 1 ಇವನು ಮತ್ತು ತಮ್ಮ ಮೃತ ಮಗಳ ನಡುವೆ ಮಾತಿನ ಕಲಹ ನಡೆದು, ಮೃತ ದೇವಮ್ಮ ಅವಳ ಮನೆಯಲ್ಲಿ ಸ್ವತಃ ತಾನೇ ದೇಹಕ್ಕೆ ಬೆಂಕಿ ಇಟ್ಟುಕೊಂಡಳು ಮತ್ತು ಆ ಕೂಡಲೇ ಅವಳನ್ನು ಇಳಕಲ್ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗಾಗಿ ಸೇರಿಸಲಾಯಿತು ಎಂದು ದೂರುದಾರನಿಗೆ ತಿಳಿಸಿರುತ್ತಾರೆ. ದೂರುದಾರರು ತಮ್ಮ ಹೆಂಡತಿ ಮತ್ತು ಸಂಬಂಧಿಗಳೊಂದಿಗೆ ಇಳಕಲ್ ಆಸ್ಪತ್ರೆಗೆ ಹೋಗುವರು ಮತ್ತು ಆಸ್ಪತ್ರೆಯವರಿಂದ ಮೃತಳನ್ನು ಜಿಲ್ಲಾ ಆಸ್ಪತ್ರೆ, ಬಾಗಲಕೋಟೆಗೆ ತೆಗೆದುಕೊಂಡು ಹೋಗಲಾಯಿತು ಎಂಬ ಮಾಹಿತಿ ತಿಳಿಯುತ್ತದೆ. ಅವರೆಲ್ಲರು ಮೃತಳನ್ನು ನೋಡಲು ಬಾಗಲಕೋಟೆಗೆ ಬರುತ್ತಾರೆ. ಮೃತಳ ದೇಹವು ಸಂಪೂರ್ಣವಾಗಿ ಸುಟ್ಟಿರುತ್ತದೆ ಮತ್ತು ಅವಳನ್ನು ವಿಚಾರಿಸಿದಾಗ, ಮೃತಳು ಆರೋಪಿ ಸಂ. 1 ರಿಂದ 4 ರ ಆರೋಪಿಗಳು ನೀಡಿದ ಹಿಂಸೆ ತಾಳಲಾರದ ಕಾರಣ ನಾನು ಆ ರಾತ್ರಿ ಸುಮಾರು 10.30 ರಲ್ಲಿ ಸ್ವತಃ ನಾನು ನನ್ನ ಮೈಮೇಲೆ ಸೀಮೆಎಣ್ಣೆ ಸುರಿದುಕೊಂಡು ಬೆಂಕಿ ಹಚ್ಚಿಕೊಂಡೇ ಎಂದು ಮೃತಳು ಹೇಳಿರುತ್ತಾಳೆ. ಮುಂದುವರೆದು ಮೃತಳು ಬೆಂಕಿಯನ್ನು ಆರಿಸಲುಬಂದ ಆರೋಪಿ ಸಂಖ್ಯೆ 1 – ಅವನಿಗೂ ಸುಟ್ಟಗಾಯಗಳು ಆಯಿತೆಂದು ಮತ್ತು ತನ್ನ ಮಗಳ ಕಾಲು ಮತ್ತು ಬೆನ್ನಿಗೂ ಸುಟ್ಟ ಗಾಯಗಳಾಯಿತೆಂದು ಹೇಳಿರುತ್ತಾಳೆ. ಈ ಎಲ್ಲಾ ಆಪಾದನೆಗಳಿಂದ ಆರೋಪಿ ಸಂಖ್ಯೆ 1 ರಿಂದ 4 ರಲ್ಲಿನ ಆರೋಪಿಗಳ ಮೇಲೆ ಭಾರತ ದಂಡ ಸಂಹಿತೆಯ 34 ನೇ ಪ್ರಕರಣವನ್ನು ಓದಿಕೊಳ್ಳುವುದರೊಂದಿಗೆ 323, 504, 498ಎ ಪ್ರಕರಣದ ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳೆಂದು ಆಪಾದಿಸಿ ಪ್ರಥಮ

ಮಾಹಿತಿ ವರದಿ ದಾಖಲು ಮಾಡಿರುತ್ತಾರೆ. ದಿನಾಂಕ 27.12.2010 ರಂದು ಮೃತ ದೇವಮ್ಮ ಮರಣವನ್ನಪ್ಪಿದಳು, ಪೊಲೀಸರ ಕೋರಿಕೆಯ ಮೇಲೆ, ಭಾರತ ದಂಡ ಸಂಹಿತೆಯ 302ನೇ ಪ್ರಕರಣದ ಅಡಿಯಲ್ಲಿ ಅಪರಾದವನ್ನು ಸಹ ಈ ಮೊಕದ್ದಮೆಯಲ್ಲಿ ಸೇರಿಸಲಾಯಿತು.

3. ಮೊಕದ್ದಮೆಯನ್ನು ರುಜುವಾತು ಪಡಿಸುವುದಕ್ಕೆ ಪ್ರಾಸಿಕ್ಯೂಷನ್ ಅವರು ಪ್ರಾ.ಸಾ. 1 ರಿಂದ ಪ್ರಾ.ಸಾ. 25 ರಲ್ಲಿರುವ ಎಲ್ಲಾ 25 ಸಾಕ್ಷಿದಾರರನ್ನು ವಿಚಾರಣೆ ಮಾಡಿರುತ್ತಾರೆ ಮತ್ತು ನಿಶಾನೆ ಪಿ 1 ರಿಂದ ಪಿ 39 ರವರೆಗಿನ ದಸ್ತಾವೇಜುಗಳನ್ನು ಮತ್ತು 1 ರಿಂದ 4 ಮುದ್ದೆಮಾಲುಗಳನ್ನು ಗುರುತು ಮಾಡಿರುತ್ತಾರೆ. ಪ್ರತ್ಯರ್ಜಿದಾರರ ಕಡೆಯಿಂದ ಸಾಕ್ಷಿದಾರರನ್ನು ವಿಚಾರಣೆ ಮಾಡಿರುವುದಿಲ್ಲ ಆದರೆ ನಿಶಾನೆ ಡಿ1 ಮತ್ತು ನಿಶಾನೆ ಡಿ2 ರ ಪ್ರಕಾರ ಎರಡು ದಸ್ತಾವೇಜನ್ನು ಗುರುತುಮಾಡಿರುತ್ತಾರೆ.

4. ನಾವು, ಅಪೀಲುದಾರ-ಆರೋಪಿ ಸಂಖ್ಯೆ 1 ಇವರ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿಗಳು ಮಂಡಿಸಿದ ವಾದವನ್ನು ಆಲಿಸಿರುತ್ತೇವೆ ಮತ್ತು ಅಪೀಲು ಪ್ರತಿವಾದಿ ರಾಜ್ಯದ ಪರವಾಗಿ ಸರ್ಕಾರಿ ನ್ಯಾಯವಾದಿಗಳು ಹಾಜರಾಗಿ ಮಂಡಿಸಿದ ವಾದವನ್ನು ಆಲಿಸಿರುತ್ತೇವೆ.

5. ಅಪೀಲುದಾರರು ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿಗಳು ಇಡೀ ಮೊಕದ್ದಮೆಯನ್ನು ತಾಲೂಕು ಕಾರ್ಯನಿರ್ವಹಣಾ ಮ್ಯಾಜಿಸ್ಟ್ರೇಟರ ಮುಂದೆ ಮೃತ ದೇವಮ್ಮ ನೀಡಿದ ಮರಣಕಾಲೀನ ಹೇಳಿಕೆಯ (ನಿಶಾನೆ ಪಿ-17) ಆಧಾರದ ಮೇಲೆ ವಿಚಾರಣೆ ಮಾಡಲಾಗಿದೆ ಎಂದು ತಮ್ಮ ವಾದವನ್ನು ಮಂಡಿಸಿರುತ್ತಾರೆ. ವಿಚಾರಣೆಯ ಮೂಲಕ ದಾಖಲೆ ಮೇಲೆ ಮಂಡಿಸಿದ ಸಾಕ್ಷ್ಯಗಳನ್ನು ನೋಡಿದಾಗ ಮೃತ ವ್ಯಕ್ತಿ ನೀಡಿದ ಮರಣಕಾಲೀನ ಹೇಳಿಕೆಯನ್ನು ನೀಡಿರುವುದಿಲ್ಲ ಮತ್ತು ದಾವೆಯು ವಿಚಾರಣೆಗೆ ಮೊಕದ್ದಮೆಯಲ್ಲಿ ಪ್ರಾಸಿಕ್ಯೂಷನ್ ಅದನ್ನು ಸೃಜಿಸಿಕೊಂಡಿರುವುದನ್ನು ಇಲ್ಲಿ ಕಾಣುತ್ತೇವೆ ಎಂದು ತಮ್ಮ ವಾದದಲ್ಲಿ ಮಂಡಿಸಿರುವರು. ದಾಖಲೆ ಮೇಲಿನ ಸಾಕ್ಷ್ಯಾಗಳಲ್ಲಿ ಮರಣಕಾಲೀನ ಹೇಳಿಕೆ ನೀಡುವಾಗ ಮೃತಳ ಪೋಷಕರಾದ ಪ್ರಾ.ಸಾ. 4 ಮತ್ತು ಪ್ರಾ.ಸಾ. 10 ಇವರು ಸಹ ಹಾಜರಿರುತ್ತಾರೆಂದು

ದಾಖಲುಗೊಂಡಿರುವುದನ್ನು ನೋಡಬಹುದಾಗಿದೆ. ಮೃತದೇವಮ್ಮಳ ಮರಣಕಾಲೀನ ಹೇಳಿಕೆಯನ್ನು ದಾಖಲಿಸುವುದಕ್ಕೆ ಸಂಬಂಧಪಟ್ಟ ಪೊಲೀಸ್ ಅಧಿಕಾರಿಗಳು ಮತ್ತು ವೈದ್ಯಾಧಿಕಾರಿಗಳು ಅವಶ್ಯವಾಗಿ ತಾಲೂಕು ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟರನ್ನು ದಿನಾಂಕ 20.12.2010 ರಂದು ನಿವೇದಿಸಿವುದನ್ನ ಸಾಕ್ಷ್ಯಗಳಲ್ಲಿ ನೋಡಬಹುದಾಗಿದೆ. ಆದರೆ 20.12.2010 ರಂದು ಮರಣಕಾಲೀನ ಹೇಳಿಕೆಯನ್ನು ತಹಸೀಲ್ದಾರರು ದಾಖಲಿಸಿಕೊಂಡಿಲ್ಲ ವೆಂದು ಮಾನ್ಯ ನ್ಯಾಯವಾದಿಗಳು ಮಂಡಿಸಿದ ವಾದದಲ್ಲಿ ಆ ನಿರ್ದಿಷ್ಟ ದಿನದಂದು ಮೃತ ವ್ಯಕ್ತಿ ಹೇಳಿಕೆ ನೀಡುವುದಕ್ಕೆ ಯುಕ್ತ ಪರಿಸ್ಥಿಯಲ್ಲಿ ಇರಲಿಲ್ಲವೆಂದು ಆ ದಿನದ ಆಸ್ಪತ್ರೆಯ ಪ್ರಭಾರದಲ್ಲಿದ್ದ ವೈದ್ಯರ ಹೇಳಿಕೆಯನ್ನು ತಮ್ಮ ವಾದದಲ್ಲಿ ದಾಖಲಿಸಿರುತ್ತಾರೆಯೆಂದು ನಿವೇದಿಸಿದ್ದಾರೆ.

6. ಮುಂದುವರೆದು, ಮಾನ್ಯ ನ್ಯಾಯವಾದಿಗಳು, ಮೃತಳು ಪ್ರಜ್ಞಾವಸ್ಥೆಯಲ್ಲಿದ್ದಾಗ, ಅವಳು ಯುಕ್ತ ಪರಿಸ್ಥಿತಿಯಲ್ಲಿ ಇದ್ದಾಗ ತಾಲೂಕು ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟ್‌ರವರಿಗೆ ಮಾಹಿತಿ ತಿಳಿಸಿದಾಗ, ಅವನು ಅಲ್ಲಿಗೆ ಬಂದು ಮರಣಕಾಲೀನ ಹೇಳಿಕೆಯನ್ನು ದಾಖಲಿಸಿಕೊಳ್ಳುತ್ತೇನೆಂದು ಹೇಳಿರುವುದನ್ನು ತಿಳಿಸಿರುತ್ತಾರೆ. ಅದರ ಅನುಸಾರವಾಗಿ ಪ್ರಾಸಿಕ್ಯೂಷನ್ ಮೊಕದ್ದಮೆಯ ಪ್ರಕಾರ 22.10.2010 ರಂದು ಮರಣಕಾಲೀನ ಹೇಳಿಕೆಯನ್ನು ದಾಖಲಿಸಿ ಕೊಂಡಿರುವುದನ್ನು ತಿಳಿಸುತ್ತದೆ. ಹಾಗಾಗಿ, ಪ್ರಾಸಿಕ್ಯೂಷನ್ ಅವಲಂಬಿತವಾಗಿರುವಂತೆ ಮೃತಳು ಹೇಳಿಕೆ ನೀಡುವ ಸ್ಥಿತಿಯಲ್ಲಿ ಇರಲಿಲ್ಲ ಎಂಬುದು ನಂಬಲರ್ಹವೆಂದು ಸ್ವತಃ ಸ್ಪಷ್ಟವಾಗಿ ಕಂಡುಬರುವುದನ್ನು ಅವರು ನಿವೇದಿಸಿರುತ್ತಾರೆ.

7. ಅವರು ತಮ್ಮ ವಾದವನ್ನು ಮುಂದುವರಿಸುತ್ತಾ ಮತ್ತಷ್ಟು ನಂಬಲರ್ಹ ಅಂಶಗಳನ್ನು ಈ ರೀತಿಯಲ್ಲಿ ನಿರೂಪಿಸುತ್ತಾ ಹೋಗುತ್ತಾರೆ. ಅಂದರೆ ಮೃತಳ ಮೃತದೇಹದ ಶವ ಪರೀಕ್ಷೆ ನಡೆಸಿದ ವೈದ್ಯರು ಮರಣೋತ್ತಾರ ಪರೀಕ್ಷೆಯ ವರದಿಯ ಪ್ರಕಾರದಂತೆ, ಮೃತಳ ದೇಹ ಶೇಕಡ 90–95 ರಷ್ಟು ಭಾಗ ಸುಟ್ಟುಹೋಗಿತ್ತು ಎಂದು ವರದಿಯಲ್ಲಿ ವೈದ್ಯರು ತಿಳಿಸಿರುತ್ತಾರೆ. ಹಾಗಾಗಿ, ದೇಹಕ್ಕೆ ಅಂಥ ವ್ಯಾಪಕವಾದ ಸುಟ್ಟಗಾಯಗಳು ಆಗಿರುವಾಗ, ಮಹಿಳೆಯೂ ಅಂಥ ಮರಣಕಾಲೀನ ಹೇಳಿಕೆಯನ್ನು ಹೇಗೆ ನೀಡಲು ಸಾಧ್ಯವೆಂದು ತಮ್ಮ

ವಾದದಲ್ಲಿ ನಿವೇದಿಸಿರುತ್ತಾರೆ. ಈ ಸಂಬಂಧದಲ್ಲಿ, ಅಪೀಲುದಾರರ ಪರವಾಗಿ ಮಾನ್ಯ ನ್ಯಾಯವಾದಿಗಳು ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ವರದಿಯಾಗಿರುವ ಮೊಕದ್ದಮೆಯಾದ ***ಸುರೀಂದರ್ ಕುಮಾರ್ –ವಿರುದ್ಧ– ಹರಿಯಾಣ ರಾಜ್ಯ***[1], ತೀರ್ಪನ್ನು ಸದರಿ ಮೊಕದ್ದಮೆಗೆ ಅವಲಂಬನೆಯಾಗಿ ಉಲ್ಲೇಖಿಸುತ್ತಾರೆ.

8. ಅಪೀಲುದಾರರ ಮಾನ್ಯ ನ್ಯಾಯವಾದಿಗಳು ಈ ನ್ಯಾಯಾಲಯದ ಗಮನವನ್ನು ಸೆಳೆಯುತ್ತಾ ಸದರಿ ನಿರ್ಣಯದಲ್ಲಿ ಸುಸಂಗತವಾದ ಪ್ಯಾರಾಗ್ರಾಫ್‌ಗಳಾದ 10, 12, 13 ಮತ್ತು 14 ನೇ ಪ್ಯಾರಾಗ್ರಾಫ್‌ಗಳನ್ನು ಮತ್ತು ಅದರಲ್ಲಿ ನಿರೂಪಿಸಿದ ತತ್ವಗಳ ದೃಷ್ಟಿಯನ್ನು ನಿವೇದಿಸಿರುವರು. ಇದರಿಂದ ಅವಲಂಬಿತವಾಗಿರುವ ವಿಚಾರಣೆಯೂ ಮೃತಳು ಮರಣಕಾಲೀನ ಹೇಳಿಕೆಯನ್ನು ನೀಡುವುದಕ್ಕೆ ಅವಳು ಯೋಗ್ಯ ಪರಿಸ್ಥಿತಿಯಲ್ಲಿ ಇರಲಿಲ್ಲವೆಂದು ಈ ನ್ಯಾಯಾಲಯವು ಊಹಿಸಬಹುದಾಗಿದೆಯೆಂದು ನಿವೇದಿಸಿದ್ದಾರೆ. ಪ್ರಾಸಿಕ್ಯೂಷನ್ ಮೊಕದ್ದಮೆಯನ್ನು ಅವರ ವಾದಾಂಶದಲ್ಲೂ ಸಹ ನೋಡಿದಾಗ, ಅದು ಒಂದು ಕಡೆ ಮರಣಕಾಲೀನ ಹೇಳಿಕೆಯ ಮೇಲೆ ಅವಲಂಬಿತವಾಗಿರುವ ಪ್ರಾಸಿಕ್ಯೂಷನ್ ಪ್ರಕಾರ (ನಿಶಾನೆ ಪಿ–17) ಆರೋಪಿಗಳಾದ ಸಂ.1 ರಿಂದ 4 ರ ಆರೋಪಿಗಳ ಕಾರಣದಿಂದಲೇ ನರಹತ್ಯೆಯ ಸಾವಾಗಿದೆ ಎಂದು ಕಾಣಬಹುದಾಗಿದೆಯೆಂದಿದ್ದರು, ಫಿರ್ಯಾದುದಾರ (ನಿಶಾನೆ ಪಿ–6) ದೃಷ್ಟಿಯಿಂದ ನೋಡಿದಾಗ ದೂರಿನಲ್ಲಿ ಹೇಳಿಕೆ ನೀಡಿದ ಸ್ವತಃ ಮೃತಳ ತಂದೆಯವರು ಆಸ್ಪತ್ರೆಗೆ ಹೋದಾಗ ಮೃತಳು ಸ್ವತಃ ತಾನೇ ಮೈಮೇಲೆ ಸೀಮೆಎಣ್ಣೆಯನ್ನು ಸುರಿದುಕೊಂಡು, ಸ್ವತಃ ತಾನೇ ಬೆಂಕಿ ಹಚ್ಚಿಕೊಂಡೆ ಎಂದು ಹೇಳಿದ್ದನ್ನು ದೂರಿನಲ್ಲಿ ಹೇಳಿಕೆಯಾಗಿ ದಾಖಲಿಸಿರುವರು. ಆದುದರಿಂದ, ಈ ಎಲ್ಲಾ ದಾಖಲೆಗಳ ಮೇಲಿನ ಮತ್ತು ವಿಷಯವನ್ನು ನೋಡಿದಾಗ ಮತ್ತು ಮೃತಳ ದೇಹವು ಶೇಕಡವಾರು ಸುಟ್ಟಿರುವುದನ್ನು ನೋಡಿದಾಗ ಮತ್ತು ಇಡೀ ದೇಹವು ಸುಟ್ಟಿರುವಾಗ ಮೃತಳು ನಿಶಾನೆ ಪಿ–17 ರ ಮೇಲೆ ಹಬ್ಬೆರಳ ಗುರುತನ್ನು ಹಾಕಿರುವುದನ್ನು ನಂಬಲು ಸಾಧ್ಯವಾಗುವುದಿಲ್ಲ ಎಂದು ವಾದವನ್ನು ಮಂಡಿಸಿರುವರು.

1. ಜೆಟಿ 2011 (13) ಎಸ್‌ಸಿ 290 = (2011) 10 ಎಸ್‌ಸಿಸಿ 173

9. ತಮ್ಮ ವಾದವನ್ನು ಮುಂದುವರೆಸುತ್ತಾ, ಅಗತ್ಯ ಪಡಿಸಿದ ಮರಣಕಾಲೀನ ಹೇಳಿಕೆಯ ಪ್ರಾರಂಭದಲ್ಲಿ ಮೃತಳು ಹೇಳಿಕೆ ನೀಡುವುದಕ್ಕೆ ಅವಳು ಪ್ರಜ್ಞಾವಸ್ಥೆಯಲ್ಲಿ ಇದ್ದಾಳೆಂದು ಮತ್ತು ಅವಳು ಹೇಳಿಕೆ ನೀಡುವುದಕ್ಕೆ ಯುಕ್ತ ಪರಿಸ್ಥಿತಿಯಲ್ಲಿ ಇದ್ದಾಳೆಂದು ವೈದ್ಯರು ಪ್ರಮಾಣೀಕರಿಸಿರುವುದಿಲ್ಲ ಎಂದು ನಿವೇದಿಸುತ್ತಾರೆ. ಈ ಎಲ್ಲ ಕಾರಣಗಳ ಮೇಲೆ, ಅವರು ವಿಚಾರಣಾ ನ್ಯಾಯಾಲಯವು ಮೌಖಿಕ ಮತ್ತು ದಸ್ತಾವೇಜಿನ ರೂಪದಲ್ಲಿರುವ ದಾಖಲೆಯ ಮೇಲಿರುವ ವಸ್ತು ವಿಷಯವನ್ನು ಯುಕ್ತವಾಗಿ ಪರಾಮರ್ಶಿಸದಿರುವುದು ಕಂಡುಬರುತ್ತದೆ ಎಂದು ನಿವೇದಿಸಿರುವರು. ವಿಚಾರಣಾ ನ್ಯಾಯಾಲಯವು ಭಾರತ ದಂಡ ಸಂಹಿತೆಯ 498ಎ ಮತ್ತು 302 ಪ್ರಕರಣದ ಮೇರೆಗಿನ ಅಪರಾದಗಳಿಗಾಗಿ ಆರೋಪಿಗಳ ಸಾಕ್ಷ್ಯಗಳನ್ನು ತಪ್ಪಾಗಿ ಓದಿಕೊಂಡಿರುತ್ತದೆ ಮತ್ತು ಆರೋಪಿಗಳು ತಪ್ಪಾಗಿ ಅಪರಾಧಿಗಳೆಂದು ನಿರ್ಣಯಿಸಿದೆಯೆಂದು ನಿವೇದಿಸಿದ್ದಾರೆ.

10. ವಿರೋಧವಾಗಿ, ಮಾನ್ಯ ಸರ್ಕಾರಿ ನ್ಯಾಯವಾದಿಗಳು, ನಿಶಾನೆ ಪಿ 17ನ್ನು ವೈದ್ಯರು ಹಾಜರಾತಿಯಲ್ಲಿಯೇ ತಾಲೂಕು ಕಾರ್ಯನಿರ್ವಹಣಾ ಮ್ಯಾಜಿಸ್ಟ್ರೇಟರು ಮರಣಕಾಲೀನ ಹೇಳಿಕೆಯಾಗಿ ದಾಖಲಿಸಿ ಕೊಂಡಿದ್ದಾರೆಂದು ನಿವೇದಿಸಿರುವರು. ಅವರು, ಮರಣಕಾಲೀನ ಹೇಳಿಕೆಯ ಪುಟದ ಕೆಳಭಾಗದಲ್ಲಿ ಹಾಜರಿದ್ದ ವೈದ್ಯರ ಸಹಿ ಹಾಗೂ ಮೊಹರು ಇರುವುದನ್ನು ಸಹ ಸಲ್ಲಿಸಿರುವರು. ಆದುದರಿಂದ, ಮತ್ತೊಂದು ಕಡೆಯ ವಾದಾಂಶದಲ್ಲಿ ಸಮರ್ಥಿಸಲಾಗದ ಎಲ್ಲಾ ಕ್ಷತಿಗಳನ್ನು ಮಾನಸಿಕ ಪರಿಸ್ಥಿತಿಯ ಸಂಬಂಧದಲ್ಲಿ ಪ್ರಮಾಣೀಕರಿಸುವ ಪ್ರಮಾಣಪತ್ರ ಇಲ್ಲವೆಂದು ನಿವೇದಿಸಿರುತ್ತಾರೆ. ಅವರು ಖುದ್ದು ಹಾಜರಿದ್ದ ತಾಲೂಕ ಕಾರ್ಯನಿರ್ವಹಣಾ ಮ್ಯಾಜಿಸ್ಟ್ರೇಟರಂತೆಯೇ ವೈದಾಧಿಕಾರಿಗಳೂ ನ್ಯಾಯಾಲಯದ ಮುಂದೆ ಮೃತಳು ಸ್ವತಃ ತಾನೇ ಹಾನಿ ಮಾಡಿಕೊಂಡದ್ದನ್ನು ನಿರೂಪಿಸಿ ಮರಣಕಾಲೀನ ಹೇಳಿಕೆಯನ್ನು ಅವರು ದಾಖಲಿಸಿಕೊಂಡಿರುವುದನ್ನ ಮೌಖಿಕವಾಗಿ ಸ್ಪಷ್ಟಪಡಿಸಿರುವುದನ್ನು ನಿವೇದಿಸಿರುವರು. ಅವರು ಈ ಎಲ್ಲಾ ಸಾಕ್ಷಿದಾರರನ್ನು ವಿಚಾರಣಾ ಪಾಟೀ–ಸವಾಲು ಮಾಡಿದಾಗ ನಡೆದ ವಿಚಾರಣಾ ಸಂದರ್ಭದಲ್ಲಿ, ಅವರಿಂದ ಯಾವುದೇ ಅಪನಂಬಿಕೆಯ ಹೇಳಿಕೆಯೂ ಬಂದಿರುವುದಿಲ್ಲ ಎಂದು ನಿವೇದಿಸಿರುವರು,

ಆದುದರಿಂದಲೇ ಈ ಮರಣಾಕಾಲೀನ ಹೇಳಿಕೆಯು ತೃಪ್ತಿಕರವಾಗಿ ಸ್ಥಾಪಿತವಾಗಿದೆ ಹಾಗೂ ಇದು ಒಂದು ನರಹತ್ಯೆಯ ಸಾವಾಗಿರುವುದನ್ನು ತೋರಿಸುತ್ತಾರೆ ಎಂದು ವಾದದಲ್ಲಿ ನಿವೇದಿಸಿರುತ್ತಾರೆ. ಅವರು ಮುಂದುವರೆದು ವಿಚಾರಣಾ ನ್ಯಾಯಾಲಯವು ಭಾರತ ದಂಡ ಸಂಹಿತೆಯ 302ನೇ ಪ್ರಕರಣದಂತೆಯೇ 498ಎ ಪ್ರಕರಣ ಅಡಿಯಲ್ಲಿನ ಅಪರಾಧಗಳಿಗಾಗಿ ಅಪೀಲುದಾರ ಆರೋಪಿ ಸಂ.1–ಇವನನ್ನು ಅಪರಾಧಿ ಎಂದು ನಿರ್ಣಯಿಸಲು ಈ ಎಲ್ಲಾ ವಸ್ತು ವಿಷಯಗಳ ದೃಷ್ಟಿಕೊನವನ್ನು ಪರಿಗಣಿಸಿ ಸರಿಯಾದ ತೀರ್ಮಾನಕ್ಕೆ ಬಂದಿರುತ್ತದೆ ಮತ್ತು ವಿಚಾರಣಾ ನ್ಯಾಯಾಲಯದ ತೀರ್ಪು ಕಾನೂನು ಸಮ್ಮತವಾದುದಾಗಿದೆ ಮತ್ತು ಈ ಅಪೀಲಿಗೆ ಯಾವುದೇ ಗುಣಾರ್ಹತೆಗಳು ಇರುವುದಿಲ್ಲ ಎಂದು ವಾದದಲ್ಲಿ ನಿವೇದಿಸಿರುತ್ತಾರೆ ಮತ್ತು ಇದರಿಂದ ಅಪೀಲು ಅರ್ಜಿಯನ್ನು ವಜಾಮಾಡಬೇಕೆಂದು ನಿವೇದಿಸಿರುವರು.

11. ಮುಂದುವರೆದ ಸರ್ಕಾರಿ ನ್ಯಾಯವಾದಿಗಳು, ಮರಣಕಾಲೀನ ಹೇಳಿಕೆಯು ಅಪರಾಧವನ್ನು ನಿರ್ಣಯಿಸುವುದಕ್ಕೆ ಏಕೈಕ ಮೂಲಾಧಾರವಾಗಿದೆ ಮತ್ತು ಅದನ್ನು ಇತರ ಸಾಕ್ಷಿಗಳಿಂದ ಪುಷ್ಟಿಕರೀಸುವ ಅಗತ್ಯವಿಲ್ಲವೆಂದು ನಿವೇದಿಸಿರುವರು. ಈ ಸಂಬಂಧದಲ್ಲಿ ಮಾನ್ಯ ಸರ್ಕಾರೀ ನ್ಯಾಯಾವಾದಿಗಳು ಇದಕ್ಕೆ ಅವಲಂಬನೆಯಾಗಿ ಮಾನ್ಯ ಅಪೆಕ್ಸ್ ನ್ಯಾಯಾಲಯದ ***ಭಗವಾನ್ ತುಕಾರಾಂ ದಾಂಗೆ –ವಿರುದ್ಧ– ಮಹಾರಾಷ್ಟ್ರ ಸರ್ಕಾರ*** [2], ಮೊಕದ್ದಮೆಯಲ್ಲಿನ ತೀರ್ಪನ್ನು ಇಲ್ಲಿ ಉಲ್ಲೇಖಿಸುತ್ತಾರೆ ಮತ್ತು ಈ ನ್ಯಾಯಾಲಯದ ಗಮನವನ್ನು ಸದರಿ ತೀರ್ಪಿನ 8ನೇ ಪ್ಯಾರಾಗ್ರಾಫ್ ಕಡೆ ಸೆಳೆಯುತ್ತಾ ಮತ್ತು ವಿಚಾರಣಾ ನ್ಯಾಯಾಲಯ ಮರಣಕಾಲೀನ ಹೇಳಿಕೆಯು ತೃಪ್ತಿಕರವಾಗಿ ಸ್ಥಾಪಿತವಾಗಿದೆ ಎಂದು ಸರಿಯಾಗಿಯೇ ಪರಾಮರ್ಶಿಸಿದೆ ಎಂದು ನಿವೇದಿಸಿರುವರು.

12. ನಾವು ಅಪೀಲು ದಸ್ತಾವೇಜಿನಲ್ಲಿ ಒತ್ತಿ ಹೇಳಲಾದ ಕಾರಣಗಳನ್ನು, ಮೊಕದ್ದಮೆಯಲ್ಲಿ ಹಾಜರು ಪಡಿಸಿದ ಸಾಕ್ಷಿದಾರರ ವಿಚಾರಣೆಯ ಮೌಖಿಕ ಸಾಕ್ಷ್ಯಗಳನ್ನು ಮತ್ತು ದಸ್ತಾವೇಜುಗಳನ್ನು ಸಹ ಪರಿಶೀಲಿಸಿದ್ದೇವೆ.

2. 2014 ಎಸ್‌ಎಆರ್ (ಕ್ರಿಮಿನಲ್) 438

13. ಮಾನ್ಯ ಸರ್ಕಾರಿ ನ್ಯಾಯವಾದಿಗಳೂ ನಿವೇದಿಸಿದಂತೆ ಈ ಮೊಕದ್ದಮೆ ಮೃತ ದೇವಮ್ಮಳ ಮರಣಕಾಲೀನ ಹೇಳಿಕೆಯನ್ನು ಆಧಾರಿಸಿದೆ. ಆದುದರಿಂದ, ಮರಣಕಾಲೀನ ಹೇಳಿಕೆಗೆ ಸಂಬಂಧಿಸಿದ ಕಾನೂನು ಸಮ್ಮತ ಸ್ಥಾನವನ್ನು ಮೊದಲು ಪರಶೀಲಿಸಬೇಕಾಗುತ್ತದೆ ಮತ್ತು ಭಾರತ ಸಾಕ್ಷ್ಯ ಅಧಿನಿಯಮ, 1872 ರ 32(1) ನೇ ಪ್ರಕರಣದ ಅಗತ್ಯತೆಗಳನ್ನು ಅನುಪಾಲನೆ ಮಾಡಿದ ದಾಖಲೆ ಮೇಲೆ ಮಂಡಿಸಿದ ವಸ್ತು ವಿಷಯಗಳು ಇದ್ದಾಗ ಅವನ್ನು ಪರಿಶೀಲಿಸ ಬೇಕಾಗುತ್ತದೆ.

14. ಮರಣಕಾಲೀನ ಹೇಳಿಕೆಯ ಪರಿಕಲ್ಪನೆಯೂ ಇಂಗ್ಲೀಷ್ ಮೂಲದ್ದಾಗಿದೆ. ನಮ್ಮ ಭಾರತ ಸಾಕ್ಷ್ಯ ಅಧಿನಿಯಮ, 1872 ರ 32(1) ನೇ ಪ್ರಕರಣದಲ್ಲಿ ಇಂಗ್ಲೀಷ್‌ನ ಮರಣಕಾಲೀನ ಹೇಳಿಕೆಯ ತತ್ವಗಳನ್ನು ಪ್ರತಿಯೋಜಿಸಲಾಗಿದೆ. ಅದರಲ್ಲಿ ಯಾರೇ ವ್ಯಕ್ತಿ ಅವನ ಮರಣದ ಕಾರಣಕ್ಕೆ ಇರುವ ಹೇಳಿಕೆ ಏನಾದರೂ ಇದ್ದರೆ ಅಥವಾ ಆ ಯಾವುದೇ ಮರಣಕ್ಕೆ ಕಾರಣವಾದ ವ್ಯವಹರಣೆಯ ಸಂಗತಿಗಳು ಏನಾದರೂ ಇದ್ದರೆ ಅವುಗಳನ್ನು ತಿಳಿಸುವ, ಹಾಗೂ ಅದನ್ನು ಸಾಕ್ಷ್ಯದ ಸುಸಂಗತ ಭಾಗವೆಂದು ಮತ್ತು ಅದನ್ನು ನಂಬಲರ್ಹ ಸಾಕ್ಷ್ಯವೆಂದು ಪರಿಗಣಿಸ ಬೇಕೆಂಬ ತತ್ವವನ್ನು ಅದು ಒಳಗೊಂಡಿದೆ.

15. ಮರಣಕಾಲೀನ ಹೇಳಿಕೆಯೂ ಯಾರೇ ವ್ಯಕ್ತಿ ತನ್ನ ಮರಣದ ಕಟ್ಟಕಡೆಯ ಸ್ಥಿತಿಯಲ್ಲಿ ನೀಡಿದ ಹೇಳಿಕೆಯನ್ನು ಆಧಾರಿಸಿದೆ ಮತ್ತು ಮೃತನು ತನ್ನ ಜೀವಿತದ ಕೊನೆಯಲ್ಲಿ ತಾನು ಬದುಕುವ ಎಲ್ಲಾ ಆಸೆಯನ್ನು ಅವನು ಕೈಬಿಟ್ಟಿರುವಾಗ ಅವನ ಹೇಳಿಕೆಯು ಶಾಬ್ದಿಕ, ವ್ಯವಹರಣೆಯಾಗಿರುವುದಿಲ್ಲ ಮತ್ತು ಇಲ್ಲಿ ಸುಳ್ಳಿನ ಉದ್ದೇಶವು ಸಂಪೂರ್ಣವಾಗಿ ನಿರುತ್ತರವಾಗಿರುತ್ತವೆ ಮತ್ತು ಸಾಯುವಂತಹ ಸ್ಥಿತಿಯಲ್ಲಿ ಸತ್ಯವನ್ನು ಹೇಳುವಂತಹ ಮನಸ್ಥಿತಿ ಇರುತ್ತದೆ. ಆ ಸಂದರ್ಭದಲ್ಲಿ ಸತ್ಯವನ್ನು ನುಡಿಯುವುದರಿಂದ ಮರಣಕಾಲೀನ ಹೇಳಿಕೆಯನ್ನು ತುಂಬಾ ಪರಿಣಾಮಕಾರಿ ಹೇಳಿಕೆ ಎಂದು ಪರಿಗಣಿಸಬೇಕಾಗುತ್ತದೆ. ಆದುದರಿಂದಲೇ ಮರಣಕಾಲೀನ ಹೇಳಿಕೆಯೂ ಗಾಂಭೀರ್ಯತೆಯನ್ನು ಆಧಾರಿಸಿದೆ. ಮರಣಕಾಲೀನ ಹೇಳಿಕೆಯು ತೃಪ್ತದಾಯಕವಾಗಿ ಸ್ಥಾಪಿತವಾದ ಹೇಳಿಕೆಯಾಗಿರುತ್ತದೆ. ಹಾಗೂ ಅಪರಾಧ ನಿರ್ಣಯಕ್ಕಾಗಿ ಅದು ಏಕೈಕ ಆಧಾರವಾಗಿರುತ್ತದೆ ಮತ್ತು ಇದನ್ನು ಆ ಯಾವುದೇ

ಇತರ ಮೂಲಗಳಿಂದ, ಯಾವುದೇ ಇತರ ಸಾಕ್ಷ್ಯವನ್ನು ಪುಷ್ಠಿಕರಿಸುವ ಅಗತ್ಯವಿರುವುದಿಲ್ಲ ಎಂದು ಕಾನೂನು ಸ್ಪಷ್ಟವಾಗಿ ಹೇಳುತ್ತದೆ.

16. ಸಂಬಂಧಪಟ್ಟ ಮರಣಕಾಲೀನ ಹೇಳಿಕೆಯಷ್ಟರ ಮಟ್ಟಿಗೆ ಕಾನೂನು ಸ್ಥಾನ ಇರುವಾಗ, ದಾಖಲೆ ಮೇಲೆ ಮಂಡಿಸಿದ ವಸ್ತು ವಿಷಯಗಳನ್ನು ಪರಿಶೀಲಿಸ ಬೇಕಾಗಿದೆ.

ನಿಶಾನೆ ಪಿ.17 ರಲ್ಲಿರುವ ಮರಣಕಾಲೀನ ಹೇಳಿಕೆಯನ್ನು ಪರಿಶೀಲಿಸಿದಾಗ ಮತ್ತು ಅಪೀಲುದಾರರ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿಗಳ ಮೊದಲ ವಾದಾಂಶದಲ್ಲಿ ಮಂಡಿಸಿದ ಸಂಬಂದದಲ್ಲಿ ಮರಣಕಾಲೀನ ಹೇಳಿಕೆಗೆ ವೈದ್ಯರ ಪ್ರಮಾಣೀಕರಣ ಇಲ್ಲವೆಂದು ತೋರಿಸಿರುವರು ಮತ್ತು ಈ ಮರಣಕಾಲೀನ ಹೇಳಿಕೆಯನ್ನು ಅವಳು ನೀಡುವಾಗ ಅವಳು ಯುಕ್ತವಾದ ಮಾನಸಿಕ ಸ್ಥಿತಿಯನ್ನೇ ಹೊಂದಿದ್ದಳೇ ಮತ್ತು ಪ್ರಜ್ಞಾವಸ್ಥೆಯಲ್ಲಿ ಇದ್ದಳೇ ಎಂಬ ಪ್ರಶ್ನೆಯನ್ನು ಎತ್ತಿರುವರು. ಈ ಪ್ರಶ್ನೆಗಳಿಗೆ ನಾವು, ಕಾನೂನಿನಲ್ಲಿ ವೈದ್ಯರ ಪ್ರಮಾಣೀಕರಣ ಕಡ್ಡಾಯವಾಗಿಲ್ಲ ಎಂಬುದು ನಮ್ಮ ಸ್ಪಷ್ಟವಾದ ಅಭಿಪ್ರಾಯವಾಗಿದೆ ಮತ್ತು ಅದು ಎಚ್ಚರಿಕೆಯ ನಿಯಮವಾಗಿದೆ. ಮರಣಕಾಲೀನ ಹೇಳಿಕೆಯನ್ನು ದಾಖಲಿಸಿಕೊಂಡ ವ್ಯಕ್ತಿಯ ಪ್ರಶ್ನೆ ಬಂದಾಗ ನ್ಯಾಯಾಲಯವು ಮರಣಕಾಲೀನ ಹೇಳಿಕೆಯನ್ನು ದಾಖಲಿಸಿಕೊಂಡ ವ್ಯಕ್ತಿಯನ್ನು ನಂಬಬೇಕೆ ಅಥವಾ ನಂಬಬಾರದೇ ಮತ್ತು ಮರಣಕಾಲೀನ ಹೇಳಿಕೆಯನ್ನು ದಾಖಲಿಸಿಕೊಳ್ಳುವ ವ್ಯಕ್ತಿಯು ಮರಣಕಾಲೀನ ಹೇಳಿಕೆಯನ್ನು ನೀಡುವ ವ್ಯಕ್ತಿಯ ಮಾನಸಿಕ ಸ್ಥಿತಿಯು ತೃಪ್ತಿಕರವಾಗಿದ್ದಾಗ ಮಾತ್ರವೇ ಮರಣಕಾಲೀನ ಹೇಳಿಕೆಯನ್ನು ದಾಖಲಿಸಿಕೊಳ್ಳಲು ಸಾಧ್ಯ ಎಂಬ ಅಂಶವನ್ನು ನ್ಯಾಯಾಲಯವು ವಿವೇಚಿಸಬೇಕಾಗಿದೆ. ಈ ಸಂಬಂಧದಲ್ಲಿ ನಾವು, ಸರ್ವೋಚ್ಚ ನ್ಯಾಯಾಲಯದಲ್ಲಿ ವರದಿಯಾಗಿರುವ ***ಲಕ್ಷ್ಮಣ -ವಿರುದ್ಧ- ಮಹಾರಾಷ್ಟ್ರ ಸರ್ಕಾರ್***[3], ಮೊಕದ್ದಮೆಯಲ್ಲಿ ಸರ್ವೋಚ್ಚ ನ್ಯಾಯಾಲಯದ ನ್ಯಾಯಮೂರ್ತಿಗಳು ನೀಡಿದ ತೀರ್ಪನ್ನು ಇಲ್ಲಿ ಉಲ್ಲೇಖಿಸುತ್ತಿದ್ದೇವೆ, ಅದು ಈ ಕೆಳಗಿನಂತಿದೆ:

3. ಎಐಆರ್ 2002 ಎಸ್‌ಸಿ 2973

"ಮರಣಕಾಲೀನ ಹೇಳಿಕೆಯನ್ನು–ವೈದ್ಯರ ಪ್ರಮಾಣೀಕರಣದ ಗೈರುಹಾಜರಿಯಲ್ಲಿ–ದಾಖಲಿಸಲು ಹೇಳಿಕೆದಾರನು ಅರ್ಹ ಮನಸ್ಥಿತಿ ಹೊಂದಿದ್ದಾನೆ ಎಂಬುದನ್ನು ವೈದ್ಯರ ಪ್ರಮಾಣೀಕರಣ ಇಲ್ಲದೆ– ದಾಖಲಿಸಿದ ಮರಣಕಾಲೀನ ಹೇಳಿಕೆಯನ್ನು ಸ್ವೀಕರಿಸಲು ಸಾಧ್ಯವಿಲ್ಲ– ಮರಣಕಾಲೀನ ಹೇಳಿಕೆಯನ್ನು ದಾಖಲಿಸಿಕೊಳ್ಳುವ ವ್ಯಕ್ತಿಯೇ ಮೃತ ವ್ಯಕ್ತಿ ಹೇಳಿಕೆಯನ್ನು ನೀಡಲು ತೃಪ್ತಿಕರವಾದ, ಯುಕ್ತ ಮನಸ್ಥಿತಿಯನ್ನು ಹೊಂದಿದ್ದಾನೆಂದು ತಿಳಿದಾಗ ಮಾತ್ರವೇ ವ್ಯಕ್ತಿಯ ಮರಣಕಾಲೀನ ಹೇಳಿಕೆಯನ್ನು ದಾಖಲಿಸುತ್ತಾನೆ–ವೈದ್ಯರ ಪ್ರಮಾಣೀಕರಣ ಎಚ್ಚರಿಕೆಯ ನಿಯಮವಾಗಿರುತ್ತದೆ–ಅಂದರೆ ಹೇಳಿಕೆಯು ಇಚ್ಛಾಪೂರ್ವಕವಾಗಿ ಮತ್ತು ಸತ್ಯ ಸ್ವರೂಪದಲ್ಲಿ ಅನ್ಯಥಾ ಸ್ಥಾಪಿತವಾಗಬೇಕಾಗುತ್ತದೆ."

17. ಆದುದರಿಂದ, ಅಪೀಲುದಾರರ ಮಾನ್ಯ ನ್ಯಾಯವಾದಿಗಳು ಮರಣಕಾಲೀನ ಹೇಳಿಕೆಯ ಪ್ರಾರಂಭದಲ್ಲಿ ವೈದ್ಯರ ಪ್ರಮಾಣೀಕರಣ ಇಲ್ಲದಿರುವುದರಿಂದ, ಈ ಮರಣಕಾಲೀನ ಹೇಳಿಕೆ ಸಿಂಧುವಾದುದ್ದಲ್ಲ, ಇದು ಸ್ವೀಕಾರಾರ್ಹವಲ್ಲ ಎಂದು ವಾದವನ್ನು ಮಂಡಿಸಿರುವರು. ಆದರೆ ಪ್ರಾಸಿಕ್ಯೂಷನ್ ಅವರು ಸಂಬಂಧಪಟ್ಟ ಇತರ ವಸ್ತು ವಿಷಯಗಳ ನೆರವಿನೊಂದಿಗೆ ಈ ಮರಣಕಾಲೀನ ಹೇಳಿಕೆಯನ್ನು ರುಜುವಾತು ಪಡಿಸಿರುವ ಅಂಶಕ್ಕೆ ಬಂದಾಗ, ನಾವು, ಪ್ರಾಸಿಕ್ಯೂಷನ್ ಅವರು ಸಾಕ್ಷಿದಾರರ ಸಾಕ್ಷ್ಯಗಳ ಮುಖಾಂತರ ಮತ್ತು ಮೃತಳ ತಾಯಿಯಾದ ಪ್ರಾ.ಸಾ. 10ರ ಸಾಕ್ಷ್ಯವನ್ನು ವಿಚಾರಣೆ ಮಾಡುವ ಸಂದರ್ಭದಲ್ಲಿ, ಮೃತಳ ಮರಣಕಾಲೀನ ಹೇಳಿಕೆಯನ್ನು ತಹಸೀಲ್ದಾರರು ದಾಖಲಿಸಿಕೊಳ್ಳುವಾಗ ಸ್ವತಃ ನಾನು ಮತ್ತು ನನ್ನ ಗಂಡ ಹಾಜರಾಗಿದ್ದೇವು ಎಂದು ಈ ನ್ಯಾಯಾಲಯದ ಮುಂದೆ ಮೃತಳ ತಾಯಿಯು ಸ್ವತಃ ಮೌಖಿಕವಾಗಿ ನೀಡಿದ ಸಾಕ್ಷ್ಯವನ್ನು ತುಂಬಾ ಜಾಗುರೂಕತೆಯಿಂದ ಆಲಿಸಿರುತ್ತೇವೆ. ನಿಶಾನೆ ಪಿ–17 ಮರಣಕಾಲೀನ ಹೇಳಿಕೆಯನ್ನು ದಾಖಲಿಸಿ ಕೊಳ್ಳುವಾಗ ಮೃತಳೊಂದಿಗೆ ಅವಳ ತಂದೆತಾಯಿಯರು ಇದ್ದರು ಎಂಬುದನ್ನು ಸ್ಪಷ್ಟವಾಗಿ ತಿಳಿಸುತ್ತದೆ. ಇದರಿಂದ ತಾಲೂಕು ಕಾರ್ಯನಿರ್ವಾಹಣಾ ಮ್ಯಾಜಿಸ್ಟ್ರೇಟರಂತೆಯೇ ಪೊಲೀಸರು ಸಾಕ್ಷಿದಾರರಾಗಿ ಸಾಕ್ಷ್ಯ ಹೇಳುವಾಗ ನಮ್ಮ ಹೊರತು ಅಲ್ಲಿ ಬೇರೆ ಯಾರು ಹಾಜರಿರಲಿಲ್ಲ ಎಂದು ತಿಳಿಸಿರುವರು. ಆದುದರಿಂದ, ಪ್ರಾಸಿಕ್ಯೂಷನ್

ಸಾಕ್ಷಿಗಳ ಸಾಕ್ಷ್ಯದಲ್ಲಿ ಸುಸಂಗತೆ ಇಲ್ಲದಿರುವುದು ಕಂಡುಬರುತ್ತದೆ ಮತ್ತು ಪ್ರತಿವಾದಿಗಳು ಮರಣಕಾಲೀನ ಹೇಳಿಕೆಯನ್ನು ದಾಖಲಿಸಿಕೊಳ್ಳುವಾಗ ಮೃತಳ ತಂದೆ ಮತ್ತು ತಾಯಿ ಹಾಜರಿದ್ದರು ಎಂಬುದ್ದನು ಪ್ರಾ.ಸಾ–10 ಮೌಖಿಕವಾಗಿ ದಾಖಲಿಸಿದ ದಾಖಲೆಯನ್ನು ತಂದು ಇಲ್ಲಿ ಸ್ಥಾಪಿಸಿರುವರು. ವೈದ್ಯರಂತೆಯೇ ತಹಸೀಲ್ದಾರರ ಸಾಕ್ಷ್ಯವನ್ನು ಅವಲೋಕಿಸಿದಾಗ ಮೃತ ದೇವಮ್ಮಳ ಮರಣಕಾಲೀನ ಹೇಳಿಕೆ ದಾಖಲಿಸುವುದಕ್ಕೆ ದಿನಾಂಕ 20.12.2010 ರಂದು ಬರಬೇಕೆಂದು ಪೋಲೀಸರು ತಹಸೀಲ್ದಾರರಿಗೆ ನಿವೇದಿಸಿರುವುದು ಕಂಡುಬರುತ್ತದೆ. ತಾಲೂಕು ಕಾರ್ಯನಿರ್ವಹಣಾ ಮ್ಯಾಜಿಸ್ಟ್ರಾಟರು ಸಾಕ್ಷ್ಯದಲ್ಲಿ ದಿನಾಂಕ 20.12.2010 ರಂದು ಮರಣಕಾಲೀನ ಹೇಳಿಕೆಯನ್ನು ದಾಖಲಿಸಿಕೊಳ್ಳುವುದಕ್ಕೆ ಆಸ್ಪತ್ರೆಗೆ ಹೋದಾಗ, ಅಲ್ಲಿನ ವೈದ್ಯರು ದೇವಮ್ಮ ಹೇಳಿಕೆ ನೀಡುವ ಸ್ಥಿಯಲ್ಲಿ ಇಲ್ಲವೆಂದು ತಿಳಿಸಿರುತ್ತಾರೆ. ಅದರಿಂದ, ವೈದ್ಯರು ತಹಸೀಲ್ದಾರರಿಗೆ ದೇವಮ್ಮ ಹೇಳಿಕೆ ನೀಡುವುದಕ್ಕೆ ಸಮರ್ಥಳಾದಾಗ ನಿಮಗೆ ತಿಳಿಸುತ್ತೇವೆ ಎಂದು ತಿಳಿಸಿರುತ್ತಾರೆ ಮತ್ತು ಅದಕ್ಕನುಸಾರವಾಗಿ, ವೈದ್ಯರು 22.12.2010 ರಂದು ತಹಸೀಲ್ದಾರರಿಗೆ ಹೇಳಿಕೆ ತೆಗೆದುಕೊಳ್ಳಬಹುದೆಂದು ತಿಳಿಸಿರುತ್ತಾರೆ. ಅದರಂತೆ ತಹಸೀಲ್ದಾರರು 22.12.2010 ರಂದು ಆಸ್ಪತ್ರೆಗೆ ಬಂದು ಮರಣಕಾಲೀನ ಹೇಳಿಕೆಯನ್ನು ದಾಖಲಿಸಿಕೊಂಡಿರುತ್ತಾರೆ. ಮೇಲಿನ ಎಲ್ಲಾ ಸಾಕ್ಷ್ಯಾಗಳಿಂದ ಪ್ರಾಸಿಕ್ಯೂಷನ್ ಅವರು 20.12.2010 ರಿಂದ 22.12.2010 ರ ವರೆಗೆ ಮೃತದೇವಮ್ಮ ಮರಣಕಾಲೀನ ಹೇಳಿಕೆಯನ್ನು ನೀಡುವ ಸ್ಥಿತಿಯಲ್ಲಿ ಅವಳು ಇರಲಿಲ್ಲವೆಂದು ತೋರಿಸಿರುವರು.

18. ನಾವು ಮರಣೋತ್ತರ ಪರೀಕ್ಷೆಯ ವರದಿಯನ್ನು ಸಹ ಅವಲೋಕಿಸಿದ್ದೇವೆ. ಮರಣೋತ್ತರ ಪರೀಕ್ಷೆ ನಡೆಸಿದ ವೈದ್ಯರು ಮೃತಳ ದೇಹವು ಶೇಕಡಾ 90 ರಿಂದ 95 ರಷ್ಟು ಸುಟ್ಟಗಾಯಗಳಿಂದ ಕೂಡಿತ್ತು ಎಂದು ಸ್ಪಷ್ಟವಾಗಿ ದಾಖಲಿಸಿರುವರು. ಪ್ರಾ.ಸಾ.–16 ರಲ್ಲಿನ ವೈದ್ಯರ ಸಾಕ್ಷ್ಯದಲ್ಲಿ ದೇವಮ್ಮನ ಸ್ಥಿತಿ ದಿನದಿಂದ ದಿನಕ್ಕೆ ಕ್ಷೀಣಿತವಾಗುತ್ತಿತ್ತು ಎಂದು ದಾಖಲಿಸಿರುವರು. ಮೃತಳ ತಂದೆತಾಯಿಯರು ಸಾಕ್ಷ್ಯದಲ್ಲಿ ಮೃತಳು ತುಂಬಾ ಕ್ಷೀಣವಾದ ಧ್ವನಿಯಲ್ಲಿ ಮಾತನಾಡುತ್ತಿದ್ದಳು ಎಂದು ದಾಖಲಿಸಿರುವರು ಪ್ರಾಸಿಕ್ಯೂಷನ್ ಸಾಕ್ಷಿದಾರರು ಸಾಕ್ಷಿಗಳ ಮುಖಾಂತರ ಮೃತಳ ಬೆರಳುಗಳು ಒಳಗೊಂಡಂತೆ ಅವಳ ಇಡೀ ದೇಹ ಸುಟ್ಟುಹೋಗಿರುವುದು

ದಾಖಲೆಯಿಂದ ತಿಳಿಯಬಹುದಾಗಿದೆ, ಇದರಿಂದ ಪ್ರಾಸಿಕ್ಯೂಷನ್ ಅವರು ಮರಣಕಾಲೀನ ಹೇಳಿಕೆಯಾದ ನಿಶಾನೆ ಪಿ.17 ರಲ್ಲಿ ದೇವಮ್ಮ ಅವಳ ಹೆಬ್ಬೆರಳ ಗುರುತನ್ನ ಹಾಕಿಸಿಕೊಂಡಿರುವುದು ಕಥೆಯಂತೆ ಈ ಪ್ರಕರಣದಲ್ಲಿ ಕಂಡಬರುತ್ತದೆ. ನಿಶಾನೆ ಪಿ–17 ರಲ್ಲಿ ಮೃತಳೂ ಮರಣಕಾಲೀನ ಹೇಳಿಕೆಯು ಅವಳ ಗಂಡ ಮತ್ತು ಇತರ ಕುಟುಂಬ ಸದಸ್ಯರು ಸೇರಿ ಅವಳಿಗೆ ಕಿರುಕುಳ ನೀಡುತ್ತಿದ್ದುದು ಮತ್ತು ಅವರೆಲ್ಲ ಅವಳ ಮೇಲೆ ಸೀಮೆಎಣ್ಣೆ ಸುರಿದು ಅವಳಿಗೆ ಬೆಂಕಿ ಹಚ್ಚಿರುವುದು ಸತ್ಯವೆಂದು ಸಂದೇಹಕ್ಕೆ ಆಸ್ಪದ ನೀಡುವುದಿಲ್ಲ.

19. ನಾವು ನಿಶಾನೆ ಪಿ–6 ದಸ್ತಾವೇಜನ್ನು ಪ್ರಾ.ಸಾ–4 ತಂದೆಯು ದಾಖಲಿಸಿದ ದೂರನ್ನು ಸಹ ಪರಿಶೀಲಿಸಿರುತ್ತೇವೆ. ನಿಶಾನೆ ಪಿ–6 – ದೂರಿನ ವಾದಾಂಶವನ್ನು ನೋಡಿದಾಗ, ದೂರಿನಲ್ಲಿ ದೂರುದಾರರು ತಮ್ಮ ಮಗಳು ಸುಟ್ಟುಗಾಯಗಳಿಂದ ಬಾದಿತಳಾಗಿದ್ದಾಳೆ ಎಂಬ ಮಾಹಿತಿ ತಿಳಿದ ಆ ಕೂಡಲೇ ಅವರು ಇಳಕಲ್‌ನಲ್ಲಿರುವ ಸರ್ಕಾರಿ ಆಸ್ಪತ್ರೆಗೆ ಧಾವಿಸಿರುವುದನ್ನು ತಮ್ಮ ಹೇಳಿಕೆಯಲ್ಲಿ ದಾಖಲಿಸಿರುತ್ತಾರೆ. ಅವರು ಆ ಆಸ್ಪತ್ರೆಗೆ ಹೋದಾಗ ಅಲ್ಲಿ ಆಸ್ಪತ್ರೆಯವರು ಮಗಳನ್ನು ಬಾಗಲಕೋಟೆಯಲ್ಲಿರುವ ಜಿಲ್ಲಾ ಆಸ್ಪತ್ರೆಗೆ ಕರೆದೊಯ್ಯಲಾಗಿರುವುದು ತಿಳಿದು ಬರುತ್ತದೆ. ಅವರು ತಮ್ಮ ಹೇಳಿಕೆಯನ್ನು ಮುಂದುವರೆಸುತ್ತಾ ಬಾಗಲಕೋಟೆ ಆಸ್ಪತ್ರೆಯಲ್ಲಿ ಸುಟ್ಟಗಾಯಗಳಿಂದ ಬಾದಿತಳಾದ ಮಗಳನ್ನು ನೋಡಿದ ತರುವಾಯ. ದೂರುದಾರರಾದ ಅವಳ ತಂದೆ ಇದೆಲ್ಲ ಹೇಗಾಯಿತು ಎಂದು ಪ್ರಶ್ನಿಸಿದಾಗ ಅವಳು ಗಂಡ ಮತ್ತು ಕುಟುಂಬ ಸದಸ್ಯರು ಅವಳಿಗೆ ನೀಡಿದ ಕಿರುಕುಳವನ್ನು, ಅವರೆಲ್ಲ ಹೊಲಸಾದ ಭಾಷೆಯಲ್ಲಿ ಅವಳನ್ನು ನಿಂದಿಸಿದ್ದನ್ನು ಮತ್ತು ಆರೋಪಿ ಸಂ.1 ಆಗಿರುವ, ಇಲ್ಲಿ ಅಪೀಲುದಾರನಾಗಿರುವ ಅವಳ ಗಂಡನಿಗೆ ಅವಳು ತಾನು ಆತ್ಮಹತ್ಯೆ ಮಾಡಿಕೊಳ್ಳುತ್ತೇನೆ ಎಂದಾಗ ಆರೋಪಿ ಸಂ.1/ಅಪೀಲುದಾರನೂ ಸಹ ನೀನು ಹೋಗಿ ಸಾಯಿ ಎಂದು ಅವಳಿಗೆ ಹೇಳಿ, ಅವಳನ್ನು ಮತ್ತಷ್ಟು ಮಾತುಗಳಿಂದ ನಿಂದಿಸಿದ್ದನ್ನ ತನ್ನ ತಂದೆಗೆ ತಿಳಿಸಿರುತ್ತಾಳೆ. ನಂತರದಲ್ಲಿ ಅವಳು ಸ್ವತಃ ತಾನೇ ತನ್ನ ದೇಹದ ಮೇಲೆ ಸೀಮೆಎಣ್ಣೆ ಸುರಿದುಕೊಂಡು ಬೆಂಕಿಯನ್ನು ಇಟ್ಟುಕೊಂಡಿರುವುದನ್ನು ತಂದೆಯಲ್ಲಿ ಎಲ್ಲವನ್ನು ವಿನಂತಿಸಿರುವುದು ಕಂಡುಬರುತ್ತದೆ. ಮೃತದೇವಮ್ಮ ಬಾಯಿಮಾತಿನಲ್ಲಿ ಹೇಳಿದ ವಿವರಣೆಗಳ ಆಧಾರದ ಮೇಲೆ

ದೂರುದಾರರಾದ ಅವಳ ತಂದೆ ನಿಶಾನೆ ಪಿ-6 ರ ಪ್ರಕಾರದಂತೆ ದೂರನ್ನು ದಾಖಲಿಸಿರುವರು ಮತ್ತು ನಿಶಾನೆ ಪಿ-6 ರ ದೂರಿಗೆ ತಮ್ಮ ಸಹಿಯನ್ನು ಹಾಕಿರುವರು. ಪ್ರಾಸಿಕ್ಯೂಷನ್ ಅವರ ಇಡೀ ವಾದಾಂಶವು ದೂರುದಾರರ ವಾದಾಂಶಕ್ಕಿಂತಲೂ ಭಿನ್ನವಾಗಿದೆ. ದೂರಿನ ಪ್ರಕಾರ, ಮೃತಳು ಸ್ವತಃ ತಾನೇ ಸೀಮೆಎಣ್ಣೆ ಸುರಿದು ಕೊಂಡು ಬೆಂಕಿ ಹಚ್ಚಿ ಕೊಂಡಿರುವುದರಿಂದ ಇದು ಒಂದು ಆತ್ಮಹತ್ಯೆಯ ಮೊಕದ್ದಮೆಯಾಗಿದೆ. ಇದು ನಿಶಾನೆ ಪಿ-17 ರ ಅಡಿಯಲ್ಲಿ ಮಾಡಿದ ಮರಣಕಾಲೀನ ಹೇಳಿಕೆಯೂ ಪ್ರಾಸಿಕ್ಯೂಷನ್ ಮೊಕದ್ದಮೆಗೆ ಸಂಪೂರ್ಣವಾಗಿ ವಿರುದ್ಧವಾಗಿದೆ. ಈ ನ್ಯಾಯಾಲಯ ಈ ಮೇಲಿನ ಎಲ್ಲಾ ದೃಷಿಕೋನಗಳನ್ನ ಪರಿಗಣನೆಗೆ ತೆಗೆದುಕೊಂಡರೆ. ನಿಶಾನೆ ಪಿ-17 ರ ಪ್ರಕಾರದಂತೆ ಮೃತಳು ನೀಡಿದ ಮರಣಕಾಲೀನ ಹೇಳಿಕೆಯೆಂದು ದಾಖಲಿಸಿದ ಪ್ರಾಸಿಕ್ಯೂಷನ್ ಅವರ ವಾದವನ್ನು ಸ್ವೀಕರಿಸುವುದಕ್ಕೆ ತುಂಬಾ ತ್ರಾಸಕಾರಕವಾಗಿದೆ. ಇದೊಂದು ನರಹತ್ಯೆಯೆಂದು ವಾದ ಮಂಡಿಸಿರುವ ಪ್ರಾಸಿಕ್ಯೂಷನ್ ಅವರ ವಾದವನ್ನು ಒಪ್ಪುವುದು ಕಷ್ಟಕರವಾದುದಾಗಿದೆ. ಈ ನ್ಯಾಯಾಲಯವು ಮೌಖಿಕವಾಗಿ ಮತ್ತು ದಸ್ತಾವೇಜಿನಲ್ಲಿ ದಾಖಲಾದ ಎಲ್ಲಾ ಸಾಕ್ಷ್ಯಗಳನ್ನು ಪರಿಶೀಲಿಸಿದಾಗ ಮೃತದೇವಮ್ಮ ನೀಡಿದ ಅಂಥ ಮರಣಕಾಲೀನ ಹೇಳಿಕೆಯು ತೃಪ್ತಿಕರವಾಗಿಲ್ಲದಿರುವುದನ್ನು ಅದು ದಾಖಲಿಸುತ್ತದೆ. ದಾಖಲೆಯಲ್ಲಿ ಮಂಡಿಸಿದ ಎಲ್ಲಾ ವಸ್ತು ವಿಷಯವನ್ನು ಅವಲೋಕಿಸಿದಾಗ ಇದು ದೇವಮ್ಮಳ ಮರಣ ಒಂದು ಆತ್ಮಹತ್ಯೆಯ ಮೊಕದ್ದಮೆಯಾಗಿರುವುದು ಸ್ಪಷ್ಟವಾಗುತ್ತದೆ.

20. ಪ್ರಾಸಿಕ್ಯೂಷನ್ ಸಾಕ್ಷಿದಾರರ ಸಾಕ್ಷ್ಯದ ಅನುಸಾರವಾಗಿ ಮದುವೆ ನಂತರ ದೇವಮ್ಮ ವೈವಾಹಿಕ ಜೀವನ ನಡೆಸುವುದಕ್ಕೆ ಅವಳು ಗಂಡನ ಮನೆಗೆ ಬಂದಾಗ. ಅವಳಿಗೆ ಆಪಾದಿತ ವ್ಯಕ್ತಿಗಳು ಕಿರುಕುಳ ನೀಡಿದ ಕಾರಣಕ್ಕೆ ಅವಳೂ ತನ್ನ ತಂದೆಯ ಮನೆಗೆ ವಾಪಸಾದಳು ಅಲ್ಲಿಯೇ 2 ರಿಂದ 3 ವರ್ಷಗಳು ಇದ್ದಳು ಆ ಸಮಯದಲ್ಲಿ, ಅವಳ ಗಂಡನು ಸಹಾ ಅವಳೊಂದಿಗೆ ಇದ್ದನು ಮತ್ತು ಅವನು ಒಂದು ವರ್ಷದ ಅವಧಿಗಾಗಿ ಅವಳ ತಂದೆಯ ಮನೆಯಲ್ಲಿಯೇ ಅವನು ವಾಸವಾಗಿದ್ದನು. ತದಾನಂತರದಲ್ಲಿ ಪ್ರಸ್ತುತ ಅಪೀಲುದಾರ ಅವನ ಮನೆಗೆ ವಾಪಸಾದನು ಮತ್ತು ಹಿರಿಯರ ಸಮ್ಮುಖದಲ್ಲಿ ಅಂದರೆ. ಪ್ರಾ.ಸಾ-3 ತಿಪ್ಪಣ್ಣ

ಮತ್ತು ಇತರ ಹಿರಿಯರ ಸಮ್ಮುಖದಲ್ಲಿ ನ್ಯಾಯ ಪಂಚಾಯಿತಿಯಾಗಿ ಮತ್ತೆ ಮೃತ ದೇವಮ್ಮ ಅವಳ ಗಂಡನ ಮನೆಗೆ ಬಂದಳು ಮತ್ತು ಕುಟುಂಬ ಸದಸ್ಯರ ಕಿರುಕುಳ ಹಾಗೆಯೇ ಮುಂದುವರೆದಿತ್ತು. ಈ ಕಾರಣ ಅಪೀಲುದಾರ ಮತ್ತು ಮೃತ ದೇವಮ್ಮ ಬಾಡಿಗೆ ಮನೆಯಲ್ಲಿ ಪ್ರತ್ಯೇಕವಾಗಿ ವಾಸಿಸಲು ಆರಂಭಿಸಿದರು. ವಿಚಾರಣಾ ಅವಧಿಯಲ್ಲಿ ದಾಖಲಿಸಿದ ಸಂಗತಿಯ ಮೇಲೆ, ಅದು ಸದರಿ ಘಟನೆಯೂ ನಡೆದಿರುವುದು ಅಪೀಲುದಾರ, ದೇವಮ್ಮ ಮತ್ತು ಅವರ ಮಗಳು ಪ್ರತ್ಯೇಕವಾಗಿ ಬಾಡಿಗೆ ಮನೆಯಲ್ಲಿ ವಾಸಿಸುತ್ತಿದ್ದಾಗ ನಡೆದ ಘಟನೆಯಾಗಿರುತ್ತದೆ. ಇದಾವುದನ್ನು ಸಹ ಪ್ರತಿವಾದಿಗಳು ವಿವಾದಗೊಳಿಸದಿರುವುದು ಸುಸ್ಪಷ್ಟವಾಗಿದೆ. ಎಲ್ಲಾ ವಸ್ತುವಿಷಯವನ್ನು ಪರಿಶೀಲಿಸಿದಾಗ, ಸದರಿ ಘಟನೆಯನ್ನು ಆರೋಪಿ ವ್ಯಕ್ತಿ ಮಾತ್ರವೇ ವಿವರಿಸುವುದಕ್ಕೆ ಸಾಧ್ಯವಾಗುತ್ತದೆ. ಕಾರಣವೇನೆಂದರೆ ಸದರಿ ಘಟನೆ ಯಾವುದೇ ಸಾರ್ವಜನಿಕ ಸ್ಥಳದಲ್ಲಿ ನಡೆದಿಲ್ಲ ಅಥವಾ ಇನ್ನಾವುದೇ ಸ್ಥಳದಲ್ಲಿ ನಡೆದಿಲ್ಲ. ಸದರಿ ಘಟನೆಯೂ ಆರೋಪಿ ವ್ಯಕ್ತಿಯ ಮನೆಯಲ್ಲಿ ನಡೆದಿದೆ. ಆ ಮನೆಯಲ್ಲಿ ತಮ್ಮ ಮಗುವಿನೊಂದಿಗೆ ಗಂಡ ಹೆಂಡತಿ ಮಾತ್ರವೇ ವಾಸವಾಗಿರುತ್ತಾರೆ. ಆದುದರಿಂದ ಆರೋಪಿ ವ್ಯಕ್ತಿ ಮಾತ್ರವೇ ಸದರಿ ಘಟನೆಯನ್ನು ಹೇಗಾಯಿತು ಎಂದು ಹೇಳಲು ಇರುವ ಪ್ರತ್ಯಕ್ಷ ಸಾಕ್ಷಿಯಾಗಿರುತ್ತಾನೆ. ಕ್ಷತಿ ಪ್ರಮಾಣ ಪತ್ರದ ವಸ್ತು ವಿಷಯದ ಪ್ರಕಾರದಂತೆ ಮತ್ತು ವೈದ್ಯರ ಸಾಕ್ಷ್ಯದಂತೆ ಸುಟ್ಟ ಗಾಯಗಳು ಅಪೀಲುದಾರನಿಗೆ ಮತ್ತು ಅವರ ಮಗಳಿಗೂ ಆಗಿರುವುದು ಕಂಡುಬರುತ್ತದೆ. ಇದೆಲ್ಲ ಗಮನಿಸಿದಾಗ ಘಟನೆ ನಡೆದಾಗ ಮನೆಯಲ್ಲಿ ಇದ್ದ ಅಪೀಲುದಾರನು ಬೆಂಕಿಯನ್ನು ನಂದಿಸಲು ಪ್ರಯತ್ನಿಸಿದಾಗ ಅವನಿಗೆ ಮತ್ತು ಅವನ ಮಗಳಿಗೂ ಸುಟ್ಟಗಾಯಗಳು ಆಗಿರುತ್ತದೆ. ಆದುದರಿಂದ ಘಟನೆ ಹೇಗೆ ನಡೆಯಿತು ಎಂಬುದನ್ನು ವಿವರಿಸುವುದು ಅಪೀಲುದಾರ ವ್ಯಕ್ತಿಯೇ ಸೂಕ್ತ ವ್ಯಕ್ತಿಯಾಗಿರುತ್ತಾನೆ ಎಂಬುದು ಇಲ್ಲಿ ಕಂಡುಬರುತ್ತದೆ.

21. ವಿಚಾರಣೆಯ ನಿರ್ಣಯದ ತರುವಾಯ ದಂಡ ಪ್ರಕ್ರಿಯಾ ಸಂಹಿತೆಯ 313 ನೇ ಪ್ರಕರಣದ ಅಡಿಯಲ್ಲಿ ಅಪೀಲುದಾರ/ಆಪಾದಿತ ಬಯಸಿದರೆ ಯಾವುದೇ ಸಾಕ್ಷಿದಾರ ವಿಚಾರಣೆ ಮಾಡಲು ಅವನಿಗೆ ಅವಕಾಶ ಮಾಡಿಕೊಡುವುದಾಗಿ

ತಿಳಿಸಲಾಯಿತು. ಅಪೀಲುದಾರನು ಬೇಡವೆಂದು ತಿಳಿಸಿರುತ್ತಾನೆ ಮತ್ತು ಅವನನ್ನು ಘಟನೆಯ ಬಗ್ಗೆ ಏನಾದರೂ ಹೇಳಲು ಬಯಸುತ್ತೀಯ ಎಂದು ಕೇಳಿದಾಗ ಅವನು ಘಟನೆ ನಡೆದಾಗ ನಾನು ಮನೆಯಲ್ಲಿ ಇರಲಿಲ್ಲವೆಂದು ಮತ್ತು ನಂತರದಲ್ಲಿ ಮನೆಗೆ ಬಂದಾಗ ಅವನ ಹೆಂಡತಿ ಬೆಂಕಿ ಹಚ್ಚಿಕೊಂಡಿರುವುದು ನೋಡಿ ಬೆಂಕಿಯನ್ನು ಆರಿಸುವುದಕ್ಕೆ ಪ್ರಯತ್ನಿಸಿದ ವಿಷಯವನ್ನು ತಿಳಿಸಿರುತ್ತಾನೆ. ಈ ಪ್ರಕ್ರಿಯೆಯಲ್ಲಿ ಅವನೂ ಸಹ ಸುಟ್ಟಗಾಯಗಳಿಗೆ ಒಳಗಾಗಿರುವುದು ಮತ್ತು ಆ ಸಂದರ್ಭದಲ್ಲಿ ತಮ್ಮ ಮಗಳು ಮಧ್ಯ ಪ್ರವೇಶಿಸಿದ ಕಾರಣ ಅವಳು ಸಹ ಸುಟ್ಟಗಾಯಗಳಿಗೆ ಒಳಗಾಗಿರುವುದು ತಿಳಿಸುತ್ತಾನೆ. ಆದರೆ, ಪ್ರಾಸಿಕ್ಯೂಷನ್ ಅವರು ಸಾಕ್ಷಿದಾರರನ್ನು ಪಾಟೀ ಸವಾಲಿನ ವಿಚಾರಣೆ ನಡೆದಾಗ ಆರೋಪಿ ಮನೆಯಲ್ಲಿ ಇಲ್ಲದಿರುವುದು ಅವನ ಪ್ರತಿ ರಕ್ಷಣೆಯಾಗಿರುವುದಿಲ್ಲ. ಅವನ ಮನೆಯಲ್ಲಿ ಇಲ್ಲದಿರುವ ಮತ್ತು ಅವನ ಗೈರುಹಾಜರಿಯಲ್ಲಿ ಘಟನೆ ನಡೆದಿರುವ ಬಗ್ಗೆ ಪ್ರಾಸಿಕ್ಯೂಷನ್ ಸಾಕ್ಷಿದಾರರು ಯಾವುದೇ ಅಂಥ ಅಭಿಪ್ರಾಯಗಳನ್ನು ಸೂಚಿಸಿರುವುದಿಲ್ಲ. ಆದುದರಿಂದ ಘಟನೆ ನಡೆದಾಗ ಅಪೀಲುದಾರ/ಆರೋಪಿ ಸಂ.1 ಮನೆಯಲ್ಲಿ ಇಲ್ಲದಿರುವ ವಾದಾಂಶವನ್ನು ಸ್ವೀಕರಿಸಲು ಸಾಧ್ಯವಾಗುವುದಿಲ್ಲ.

22. ವಿಚಾರಣಾ ನ್ಯಾಯಾಲಯದ ತೀರ್ಪು ಮತ್ತು ಆದೇಶವನ್ನು ಅವಲೋಕಿಸಿದಾಗ, ವಿಚಾರಣಾ ನ್ಯಾಯಲಯ ಮರಣಕಾಲೀನ ಹೇಳಿಕೆ ಕುರಿತ ದೃಷ್ಟಿಕೋನಗಳನ್ನು ಮತ್ತು ಮರಣಕಾಲೀನ ಹೇಳಿಕೆಯ ಸಾಕ್ಷ್ಯದ ಮೌಲ್ಯವನ್ನು ಸರಿಯಾಗಿ ವಿವೇಚಿಸದಿರುವುದು ಕಂಡುಬರುತ್ತದೆ. ವಿಚಾರಣ ನ್ಯಾಯಾಲಯ ನಿಶಾನೆ ಪಿ-6 ದೂರಿನ ವಾದಾಂಶದಲ್ಲಿನ ಉಲ್ಲೇಖದ ಸಾಕ್ಷ್ಯವನ್ನು ತಪ್ಪಾಗಿ ಓದಿಕೊಂಡಿರುವುದು ಜೊತೆಗೆ ಅದು ಈ ಮರಣವನ್ನು ನರಹತ್ಯೆ ಎಂಬ ನಿರ್ಣಯಕ್ಕೆ ಬಂದಿರುವುದನ್ನು ನೋಡಬಹುದಾಗಿದೆ. ದಾಖಲೆಯ ಮೇಲೆ ಮಂಡಿಸಿದ ಇಡೀ ವಸ್ತು ವಿಷಯವನ್ನು ಅವಲೋಕಿಸಿದಾಗ, ನಮ್ಮ ಅಭಿಪ್ರಾಯದಲ್ಲಿ, ಮಾನ್ಯ ಸೆಕ್ಷನ್ಸ್ ನ್ಯಾಯಾಧೀಶರು ಈ ಮರಣವನ್ನು ನರಹತ್ಯೆಯಾಗಿದೆ ಎಂದು ತಪ್ಪಾದ ನಿರ್ಣಯಕ್ಕೆ ಬಂದಿರುತ್ತಾರೆ ಮತ್ತು ತಸನುಸಾರವಾಗಿ ಈ ಮರಣವು ಆತ್ಮಹತ್ಯೆಯಾಗಿದೆ ಎಂಬುದು ನಮ್ಮ ಅಭಿಪ್ರಾಯವಾಗಿದೆ.

23. ಸದರಿ ಅಪರಾಧಕ್ಕಾಗಿ ಅಪೀಲುದಾರ/ಆರೋಪಿ ಸಂ.1 ಇವನನ್ನು ಅಪರಾಧಿ ಎಂದು ನಿರ್ಣಯಿಸುವುದಕ್ಕೆ ಪ್ರಾಸಿಕ್ಯೂಷನ್ ಅವರು ಸಮರ್ಪಕವಾದ ಮತ್ತು ತೃಪ್ತಿಕರವಾದ ವಸ್ತು ವಿಷಯವನ್ನು ಸರಿಯಾಗಿ ಸ್ಥಾಪಿಸದೇ ಭಾರತ ದಂಡ ಸಂಹಿತೆಯ 302 ನೇ ಪ್ರಕರಣದ ಅಡಿಯಲ್ಲಿ ವಿಧಿಸಿದ ದಂಡನೀಯ ಅಪರಾಧ ದಂಡನೆಯು ಕಾನೂನಿನಲ್ಲಿ ಸಮರ್ಥನೀಯ ವಾಗಿರುವುದಿಲ್ಲ.

24. ವಿಚಾರಣ ನ್ಯಾಯಾಲಯದಲ್ಲಿ ವಿಚಾರಣೆ ಕಾಲಾವಧಿಯಲ್ಲಿ ಆರೋಪಿಯ ಮೇಲೆ ಹೊರಿಸಲಾದ ಆ ಯಾವುದೇ ಅಪರಾಧವನ್ನು ಸಾಬೀತು ಪಡಿಸುವುದಕ್ಕೆ ಸಾಧ್ಯವಾಗದಿರುವಾಗ ಉದ್ಭವಿಸುವ ಮುಂದಿನ ಪ್ರಶ್ನೆಯನ್ನು ಪರಿಗಣಿಸುವುದಾದರೆ, ಹಾಗೂ, ಮಂಡಿಸಿದ ದಾಖಲೆಯ ಮೇಲೆ ಅವನು ಇತರ ಕೆಲವು ಅಪರಾಧವನ್ನು ಎಸಗಿರುವುದು ಕಂಡುಬಂದರೆ ಅದನ್ನು ಈ ಅಪೀಲು ಹಂತದಲ್ಲಿ ನ್ಯಾಯಾಲಯವು ಪರಿಗಣನೆಗೆ ತೆಗೆದುಕೊಳ್ಳಬೇಕಾಗಿದೆಯೇ, ಈ ನ್ಯಾಯಾಲಯ ಇತರ ಅಪರಾಧಕ್ಕಾಗಿ ಅಪೀಲುದಾರನನ್ನು/ಆರೋಪಿ ಸಂ.1 ಇವನನ್ನು ದೋಷಿ ಎಂದು ನಿರ್ಣಯಿಸಬೇಕಾಗುತ್ತದೆ. ಈ ಸಂಬಂಧದಲ್ಲಿ ನಾವು ಕ್ರಿಮಿನಲ್ ದಂಡ ಪ್ರಕ್ರಿಯಾ ಸಂಹಿತೆಯ 221ನೇ ಪ್ರಕರಣವನ್ನು ಉಲ್ಲೇಖಿಸುತ್ತೇವೆ. ಅದು ಈ ಕೆಳಗಿನಂತಿದೆ:

> **"221. ಯಾವ ಅಪರಾಧವನ್ನು ಮಾಡಲಾಗಿದೆ ಎಂಬ ಬಗ್ಗೆ ಸಂಶಯವುಂಟಾದಾಗ.–**
>
> *"(1) ಹಲವು ಅಪರಾಧಗಳ ಪೈಕಿ ಯಾವುದು ರುಜುವಾತು ಮಾಡಬಹುದಾದ ಸಂಗತಿಗಳಿಂದ ಉಂಟಾಗುತ್ತದೆ ಎಂಬ ಬಗ್ಗೆ ಸಂಶಯವನ್ನುಂಟು ಮಾಡುವ ಸ್ವರೂಪದ ಒಂದು ಕೃತ್ಯ ಅಥವಾ ಕೃತ್ಯಗಳ ಸರಣಿಯು ನಡೆದಿದ್ದರೆ, ಅಂಥ ಎಲ್ಲಾ ಅಥವಾ ಅವುಗಳಲ್ಲಿ ಯಾವುದೇ ಅಪರಾಧಗಳನ್ನು ಮಾಡಿರುವುದಾಗಿ ಅಪಾದಿತನ ಮೇಲೆ ಆರೋಪ ಮಾಡಬಹುದು ಮತ್ತು ಅಂಥ ಎಷ್ಟು ಆರೋಪಗಳ ಬಗೆಗಾದರೂ ಕೂಡಲೇ ಆರೋಪ ವಿಚಾರಣೆ ಮಾಡಬಹುದು ;*

*ಅಥವಾ ಅವನ ಮೇಲೆ ಸದರಿ ಅಪರಾಧಗಳಲ್ಲಿ ಯಾವುದಾದರೂ ಒಂದನ್ನು ಮಾಡಿರುವ ಬಗ್ಗೆ ವೈಕಲ್ಪಿಕವಾಗಿ ಆರೋಪ ಮಾಡಬಹುದು.*

*(2) ಇಂಥ ಸಂದರ್ಭದಲ್ಲಿ, ಆಪಾದಿತನ ಮೇಲೆ ಒಂದು ಅಪರಾಧಕ್ಕಾಗಿ ಆರೋಪ ಮಾಡಲಾಗಿದ್ದರೆ, ಮತ್ತು (1)ನೇ ಒಳಪ್ರಕರಣದ ಉಪಬಂಧಗಳ ಮೇರೆಗೆ ಅವನ ಮೇಲೆ ಆರೋಪ ಮಾಡಬಹುದಾಗಿದ್ದ ಬೇರೆ ಅಪರಾಧವನ್ನು ಅವನು ಮಾಡಿರುವನೆಂದು ಸಾಕ್ಷ್ಯದಿಂದ ಕಂಡುಬಂದರೆ, ಅವನು ಮಾಡಿರುವುದಾಗಿ ಕಂಡು ಬಂದ ಅಪರಾಧದ ಬಗ್ಗೆ, ಅವನ ಮೇಲೆ ಆರೋಪ ಮಾಡದಿದ್ದರೂ ಸಹ, ಅವನನ್ನು ಅಪರಾಧಿಯೆಂದು ನಿರ್ಣಯಿಸಬಹುದು.”*

25. ನಾವು, ಈ ಸಂದರ್ಭದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ***ಕೆ. ಪ್ರೇಮ ಎಸ್. ರಾವ್ ಮತ್ತು ಮೊತ್ತೊಬ್ಬರು -ವಿರುದ್ಧ- ಯಡಲಾ ಶ್ರೀನಿವಾಸರಾವ್ ಮತ್ತು ಮತ್ತೊಬ್ಬರು***[4] ಮೊಕದ್ದಮೆಯಲ್ಲಿ ನೀಡಿದ ತೀರ್ಪನ್ನು ಸಹ ಉಲ್ಲೇಖಿಸುತ್ತೇವೆ. ನ್ಯಾಯಮೂರ್ತಿಗಳೂ ನೀಡಿದ ತೀರ್ಪು ಈ ಮುಂದಿನಂತಿದೆ:

“ಎ. ಕ್ರಿಮಿನಲ್ ದಂಡ ಸಂಹಿತೆ, 1973 ರ 221 ನೇ, 215 ಮತ್ತು 218 ನೇ ಪ್ರಕರಣದಲ್ಲಿ–ರೂಪಿಸಿದ ಆರೋಪವನ್ನು ಬಿಟ್ಟುಬಿಡಲು ಅಥವಾ ವಿಫಲಗೊಳಿಸಲು–ಆರೋಪಿಯು ವಾಸ್ತವವಾಗಿ ಎಸಗಿದ ಅಪರಾದಕ್ಕಾಗಿ ದೋಷಿ ಎಂದು ನಿರ್ಣಿತನಾಗುವವರೆಗೂ ಮತ್ತು ದಾಖಲುಗೊಂಡ ಸಾಕ್ಷ್ಯದ ಆಧಾರದ ಮೇಲೆ ಅಪರಾಧವು ಸಾಬೀತಾಗುವವರೆಗೂ, ರೂಪಿಸಿದ ಆರೋಪದಲ್ಲಿ ಯಾವುದೇ ದೋಷ ಅಥವಾ ಲೋಪದ ಮೂಲಕ ಆರೋಪಿ ಅಡ್ಡದಾರಿ ಹಿಡಿದಿರುವವರೆಗೂ ಮತ್ತು ನ್ಯಾಯ ವಿಫಲತೆ ಉಂಟಾಗದಿರುವವರೆಗೂ ಆಪಾದಿತ– ಪ್ರತ್ಯರ್ಜಿದಾರರ 1 ಭಾರತ ದಂಡ ಸಂಹಿತೆಯ 304–ಬಿ

4. (2003) 1 ಎಸ್‌ಸಿಸಿ 217

(ವರದಕ್ಷಿಣೆ ಸಾವು) ಪ್ರಕರಣದ ಅಡಿಯಲ್ಲಿ ಮತ್ತು ಭಾರತ ದಂಡ ಸಂಹಿತೆಯು 498–ಎ ಪ್ರಕರಣ ಅಡಿಯುಲ್ಲಿ ಪರ್ಯಾಯುವಾಗಿ ಹೊರಿಸಲಾಗಿದ್ದರೆ– ಹೊರಿಸಿದ ವಿವರ ಪತ್ರವು ಮೃತ ವ್ಯಕ್ತಿಯ ಸ್ಪಷ್ಟವಾದ ಹೇಳಿಕೆಯಾಗಿದ್ದು, ಹೇಳಿಕೆಯು ಅಂಥ ಕ್ರೌರ್ಯ ಮತ್ತು ಕಿರುಕುಳಕ್ಕೆ ಸಂಬಂಧ ಪಟ್ಟದ್ದಾಗಿದ್ದರೆ. "ಅವಳನ್ನು ಆತ್ಮಹತ್ಯೆಗೆ ಪ್ರೇರೆಪಿಸಿದಂತೆ" – ಎಂದು ವಿಚಾರಣಾ ನ್ಯಾಯಾಲಯ ಪ್ರತ್ಯರ್ಜಿದಾರ 1 ಅವನನ್ನು ಭಾರತ ದಂಡ ಸಂಹಿತೆಯ 498–ಎ ಪ್ರಕರಣದ ಅಡಿಯಲ್ಲಿ ಮಾತ್ರವೇ ದೋಷಿ ಎಂದು ನಿರ್ಣಯಿಸಿದೆ – ಮೇಲಿನ ಸಾಕ್ಷ್ಯ ಅಧಿನಿಯಮ, 1872ರ 113–ಎ ಪ್ರಕರಣದ ಅಡಿಯಲ್ಲಿ ಉದ್ಭವಿಸಿದ ಪೂರ್ವಭಾವನೆ ವಾಸ್ತಾವಾಂಶಗಳನ್ನು ಆಧಾರಿಸಿ ಮತ್ತು ಭಾರತ ದಂಡ ಸಂಹಿತೆ 306ನೇ ಪ್ರಕರಣದ ಅಡಿಯುಲ್ಲಿ ಪ್ರತ್ಯರ್ಜಿದಾರನನ್ನು ಮೊಕದ್ದಮೆಯುಲ್ಲಿ ದೋಷಿ ಎಂದು ನಿರ್ಣಯಿಸಲು ಈ ಪ್ರಕರಣದ ಅಡಿಯಲ್ಲಿ ರೂಪಿಸಿದ ಆರೋಪಕ್ಕಾಗಿ ಎಲ್ಲಾ ಅವಶ್ಯ ಘಟಕಾಂಶಗಳು ಈ ಮೊಕದ್ದಮೆ ಹೊಂದಿರುವಾಗ – ವಿಷಯವನ್ನು ಮರುವಿಚಾರಣೆಗಾಗಿ ಹಿಂದುರುಗಿಸುವ ಅಗತ್ಯ ಇರುವುದಿಲ್ಲ – ಆಪಾದಿತನು ಪ್ರತಿರಕ್ಷಣೆಗಾಗಿ ಸಾಕಾಷ್ಟು ಅವಕಾಶವನ್ನು ಹೊಂದಿರುವಾಗ – ಉಚ್ಚ ನ್ಯಾಯಾಲಯವು ಮೃತಳ ಪೋಷಕರು ಮಾಡಿದ ಅಪೀಲನ್ನು ಪುರಸ್ಕರಿಸುವುದಕ್ಕೆ ಸೂಚಿಸುತ್ತದೆ – ಪ್ರತ್ಯರ್ಜಿದಾರನು ಭಾರತ ದಂಡ ಸಂಹಿತೆ, 1860 ರ 306, 304–ಬಿ ಮತ್ತು 498–ಎ 2 ಪ್ರಕರಣದ, ಸಾಕ್ಷ್ಯ ಅಧಿನಿಯಮ, 1872 ರ 113–ಎ ಪ್ರಕರಣದ ಅಡಿಯಲ್ಲಿ ಅಪರಾಧದ ಸಂತ್ರಸ್ತರಿಗಾಗಿ ದಂಡ ಪರಿಹಾರದ ರೂಪದಲ್ಲಿ 306 ನೇ ಪ್ರಕರಣದ ಅಡಿಯಲ್ಲಿ ಪ್ರತ್ಯರ್ಜಿದಾರ 1 – ಇವನಿಗೆ ಐದು ವರ್ಷಗಳ ಕಾರವಾಸ ಮತ್ತು 20,000/– ರೂಪಾಯಿಗಳ ಜುಲ್ಮಾನೆಯ ದಂಡನೆಯನ್ನು ವಿಧಿಸಿರುತ್ತದೆ.

ಬಿ. ದಂಡ ಸಂಹಿತೆ, 1860 ಯ 306 ನೇ ಪ್ರಕರಣ ಮತ್ತು 498–ಎ ಪ್ರಕರಣದ ಮತ್ತು 304–ಬಿ ಪ್ರಕರಣದ ಅಡಿಯಲ್ಲಿ ಅಪರಾದವನ್ನು ಹೊರಿಸಲಾಗಿದೆ. 306ನೇ ಪ್ರಕರಣದ ಅಡಿಯಲ್ಲಿ

ಅದೇ ಸಂಗತಿಗಳನ್ನು ಮತ್ತು ಸಾಕ್ಷ್ಯವು ಅಪರಾದವನ್ನು ನಿರ್ಣಯಿಸುತ್ತದೆ.

ಸಿ. ಕ್ರಿಮಿನಲ್ ಪ್ರಕ್ರಿಯಾ ಸಂಹಿತೆ, 1973 – 222 ನೇ ಪ್ರಕರಣದಲ್ಲಿ ಆರೋಪಿ ಹೆಚ್ಚಿನ ಪ್ರಮಾಣದ ಅಪರಾದದಲ್ಲಿ ಖುಲಾಸೆಗೊಂಡಿರುವಾಗ, ದಾಖಲೆಯ ವಾಸ್ತಾವಾಂಶ ಸಾಕ್ಷ್ಯದ ಮೇಲೆ ಅವಲಂಬಿತವಾಗಿ ಕಡಿಮೆ ಅಪರಾಧಕ್ಕಾಗಿ ಅವನು ದೋಷಿ ಎಂದು ನಿರ್ಣಿತನಾಗಬಹುದು.”

26. ಈ ಉಪಬಂಧವನ್ನು ಮತ್ತು ಸನ್ಮಾನ್ಯ ಸರ್ವೋಚ್ಚ ನ್ಯಾಯಾಲಯದ ನಿರ್ಣಯವನ್ನು ಗಮನಿಸಿದಾಗ, ದಾಖಲೆಯ ಮೇಲೆ ಮಂಡಿತವಾದ ವಸ್ತು ವಿಷಯವನ್ನು ಅವಲೋಕಿಸಿದ ನಂತರ ಈ ನ್ಯಾಯಾಲಯವು ಅಪೀಲುದಾರ / ಆರೋಪಿಯು ಎಸಗಿರುವಂತಹ ಇತರ ಅಪರಾಧ ವಸ್ತು ವಿಷಯವನ್ನು ಸೂಚಿಸಿರುವುದನ್ನು ಅದು ಅಭಿವ್ಯಕ್ತಿಸಿದರೆ, ಸದರಿ ಅಪರಾಧಕ್ಕಾಗಿ ಆರೋಪಗಳು ಇಲ್ಲದಿದ್ದರೂ ಸಹ ಅವನನ್ನು ಅಪರಾಧಿ ಎಂದು ನಿರ್ಣಯಿಸಲು ಸಕ್ಷಮ ಅಧಿಕಾರವನ್ನು ಹೊಂದಿದೆ. ಈ ಕಾನೂನು ಸ್ಥಾನವನ್ನು ಮತ್ತು ದಾಖಲೆ ಮೇಲೆ ಮಂಡಿತವಾದ ವಸ್ತು ವಿಷಯವನ್ನು ಪರಿಗಣನೆಗೆ ತಂದುಕೊಂಡು ಪರಿಗಣಿಸಿದಾಗ, ನಾವು ಈಗಾಗಲೇ ಪರಿಶೀಲಿಸಿರುವ ಪ್ರಕಾರ, ದಂಪತಿಗಳು ಪ್ರತ್ಯೇಕವಾಗಿ ವಾಸಿಸುತ್ತಿದ್ದರು ಮತ್ತು ಗಂಡ ಮಾತ್ರವೇ ಹೊಣೆಗಾರಿಕೆಯ ವ್ಯಕ್ತಿಯಾಗಿರುತ್ತಾನೆ ಮತ್ತು ಅವನು ಮೃತಳು ಹೊಟ್ಟೆ ನೋವಿನಿಂದ ಅಥವಾ ಗಂಭೀರ ಕಾಯಿಲೆಯಿಂದ ಬಳಲುತ್ತಿದ್ದ ಕಾರಣ ಮೃತಳು ತನ್ನ ದೇಹದ ಮೇಲೆ ಸೀಮೆಎಣ್ಣೆ ಸುರಿದುಕೊಂಡು ತಾನೇ ಬೆಂಕಿ ಹಚ್ಚಿಕೊಂಡು ಆತ್ಮಹತ್ಯೆ ಮಾಡಿಕೊಳ್ಳುವ ಕಠಿಣ ನಿರ್ಧಾರವನ್ನು ತೆಗೆದು ಕೊಂಡಿರುತ್ತಾಳೆ ಎಂದು ಮೃತಳ ಗಂಡನು ಯಾವುದೇ ನಿರ್ದಿಷ್ಟ ಹೇಳಿಕೆ ನೀಡಿರುವುದಿಲ್ಲ. ಪ್ರತಿಯೊಬ್ಬ ಮಾನವನಿಗೂ ಬದುಕು ಎಂಬುದು ತುಂಬಾ ಶ್ರೇಷ್ಠ ಮಟ್ಟವಾಗಿರುತ್ತವೆ ಮತ್ತು ಯಾವುದೇ ಕಾರಣದ ಹೊರತು ವ್ಯಕ್ತಿ ಬದುಕನ್ನು ಅಂತ್ಯ ಮಾಡಿಕೊಳ್ಳುವಂಥ ಕಠಿಣ ನಿರ್ಧಾರವನ್ನು ತೆಗೆದುಕೊಳ್ಳುವುದಿಲ್ಲ. ಮೃತ ದೇವಮ್ಮ ಆತ್ಮಹತ್ಯೆ ಮಾಡಿಕೊಳ್ಳಲು ಆರೋಪಿ ಸಂ.1–ಅಪೀಲುದಾರ ನೀಡಿರುವ

ಕಿರುಕುಳ ಮತ್ತು ಚಿತ್ರಹಿಂಸೆಯ ಕಾರಣವೆಂದು ಈ ದಾಖಲೆಯ ವಸ್ತುವಿಷಯಗಳು ಸ್ಪಷ್ಟವಾಗಿ ಹೇಳುತ್ತಿದೆ. ಆದುದರಿಂದ ಅಪೀಲುದಾರ–ಆರೋಪಿ ಸಂ.1 ಇವನು ಭಾರತ ದಂಡ ಸಂಹಿತೆ ಯ 306ನೇ ಪ್ರಕರಣದ ಅಡಿಯಲ್ಲಿನ ಅಪರಾಧಕ್ಕಾಗಿ ದಂಡನೆಗೆ ಹೊಣೆಗಾರನಾಗಿರುತ್ತಾನೆ. ದಾಖಲೆ ಮೇಲೆ ಮಂಡಿತವಾದ ವಸ್ತು ವಿಷಯದೊಂದಿಗೂ ಇದನ್ನು ಸುಸ್ಥಾಪಿಸ ಬಹುದಾಗಿದೆ.

27. ಹಾಗಾಗಿ, ಅಪೀಲನ್ನು ಭಾಗಶಃ ಅಂಗೀಕರಿಸಲಾಗಿದೆ ಮತ್ತು ಅಪೀಲುದಾರ / ಆರೋಪಿ ಸಂ.1 ಇವನು ಭಾರತ ದಂಡ ಸಂಹಿತೆಯ 302 ನೇ ಪ್ರಕರಣ ಅಡಿಯಲ್ಲಿ ದಂಡನೀಯ ಅಪರಾಧವನ್ನು ಎಸಗಿರುವನೆಂದು ಅವನನ್ನು ಅಪರಾಧಿ ಎಂದು ನಿರ್ಣಯಿಸಿ ಎಸ್.ಸಿ ಸಂ.27/2011 ರಲ್ಲಿ ಸೆಷನ್ಸ್ ನ್ಯಾಯಾಧೀಶರು, ಬಾಗಲಕೋಟೆ ಇವರು ದಿನಾಂಕ 09.01.2012 ರಂದು ಹೊರಡಿಸಿದ ತೀರ್ಪು ಮತ್ತು ಆದೇಶವನ್ನು ಈ ಮೂಲಕ ವಜಾಗೊಳಿಸಲಾಗಿದೆ. ಆದರೆ, ಭಾರತ ದಂಡ ಸಂಹಿತೆಯ 498–ಎ ಪ್ರಕರಣದಡಿಯಲ್ಲಿ ದಂಡನೀಯ ಅಪರಾಧಕ್ಕಾಗಿ ದೋಷಿ ಎಂದು ನಿರ್ಣಯಿಸಿದ ಆದೇಶವನ್ನು ಈ ನ್ಯಾಯಾಲಯ ಸ್ಥಿರೀಕರಿಸುತ್ತದೆ. ಪ್ರಾಷಿಕ್ಯೂಷನ್ ಅಪೀಲುದಾರ/ಆರೋಪಿ ಸಂ. 1 ಇವನ ಮೇಲೆ ಭಾರತ ದಂಡ ಸಂಹಿತೆಯ 306 ನೇ ಪ್ರಕರಣ ಅಡಿಯಲ್ಲಿ ಎಸಗಿದ ದಂಡನೀಯ ಅಪರಾಧವನ್ನು ಸುಸ್ಥಾಪಿಸಿದೆಯೆಂದು ಹಾಗಾಗಿ, ಸದರಿ ಅಪರಾಧಕ್ಕಾಗಿ ಅವನು ದಂಡನೆಗೆ ಗುರಿಯಾಗ ಬೇಕೆಂದು ಹೆಚ್ಚಿನ ಆದೇಶವನ್ನು ಹೊರಡಿಸುತ್ತೇವೆ. ಇಷ್ಟರ ಮಟ್ಟಿಗೆ ವಿಚಾರಣಾ ನ್ಯಾಯಾಲಯವು ಅಪರಾಧವನ್ನು ನಿರ್ಣಯಿಸಿ ನೀಡಿದ ತೀರ್ಪು ಮತ್ತು ಆದೇಶವನ್ನು ಮಾರ್ಪಾಡಿಸಲಾಗಿದೆ.

28. ಆರೋಪಿ ಸಂ.1 ಇವನನ್ನು ದಿನಾಂಕ 28.12.2010 ರಂದು ದಸ್ತಗಿರಿ ಮಾಡಲಾಗಿರುತ್ತದೆ. ದಸ್ತಗಿರಿಯಾದ ದಿನಾಂಕದಿಂದ ಇವತ್ತಿನವರೆಗೂ ಆರೋಪಿ ಬಂಧನಲ್ಲಿರುತ್ತಾನೆ. ಆದುದರಿಂದ ನಮ್ಮ ಅಭಿಪ್ರಾಯದಲ್ಲಿ, ಅಪೀಲುದಾರ / ಆರೋಪಿ ಸಂ.1 ಇವನು ಈಗಾಗಲೇ ಕಾರವಾಸ ಶಿಕ್ಷೆ ಮತ್ತು ದಂಡನೆಯನ್ನು ಯುಕ್ತವಾಗಿ ಪಡೆದಿರುತ್ತಾನೆ. ಹಾಗಾಗಿ, ಬಂದೀಖಾನೆ ಪ್ರಾಧಿಕಾರಕ್ಕೆ ಈ ಮೂಲಕ

ಅಪೀಲುದಾರ/ಆರೋಪಿ ಸಂ.1 ಇವನು ಯಾವುದೇ ಇತರ ಪ್ರಕರಣದಲ್ಲಿ ಅವನು ಅವಶ್ಯಕವಾಗಿರದಿದ್ದರೆ ಅವನ್ನು ಈ ತತ್‌ಕ್ಷಣವೇ ಬಿಡುಗಡೆಗೊಳಿಸಿ ಎಂದು ನಿರ್ದೇಶಿಸುತ್ತದೆ.

ಈ ನ್ಯಾಯಾಲಯವು ಸಂಬಂಧ ಪಟ್ಟ ಬಂದೀಖಾನೆ ಪ್ರಾಧಿಕಾರಗಳಿಗೆ ಈ ಆದೇಶವನ್ನು ಕಾರ್ಯಗತಗೊಳಿಸುವ ಸಲುವಾಗಿ ಆದೇಶವನ್ನು ಕಳುಹಿಸುವುದಕ್ಕೆ ರಿಜಿಸ್ಟ್ರಾರಿಗೆ ನಿರ್ದೇಶಿಸುತ್ತದೆ.